ವಿಜಯಪುರ | ಸಂಪುಟ 04 | ಸಂಚಿಕೆ 169 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಗುರುವಾರ, ಆಗಸ್ಟ್, 27, 2026

"ಆರಂಭದಲ್ಲಿ ನಾಲ್ಕೈದು ಜನರನ್ನು ಡಿಸಿಎಂ ಮಾಡುವ ಯೋಜನೆಯಿತ್ತು. ಆದರೆ, ಒಬ್ಬರಿಗಷ್ಟೇ ಡಿಸಿಎಂ ಹುದ್ದೆ ನೀಡಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರಿ ಪರಮೇಶ್ವರ್ ಅವರನ್ನು ಡಿಸಿಎಂ ಮಾಡಿಸಿದ್ದು ನಾನೇ."



■ ಸಿದ್ಧರಾಮಯ್ಯ
ಮಾಜಿ ಮುಖ್ಯಮಂತ್ರಿ

# ನನ್ನನ್ನು ಸಿಎಂ ಹುದ್ದೆಗೆ ಶಿಫಾರಸು ಮಾಡಿದ್ದ ಸಿದ್ದರಾಮಯ್ಯ

## ಹೈಕಮಾಂಡಿಗೆ ನಾಲ್ಕೈದು ಉಪಮುಖ್ಯ ಮಂತ್ರಿಗಳನ್ನು ಮಾಡುವ ಯೋಜನೆಯಿತ್ತು | ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಹೇಳಿಕೆ

ಬೆಂಗಳೂರು: ಸಿದ್ದರಾಮಯ್ಯ ನನ್ನ ಹೆಸರನ್ನು ಮುಖ್ಯಮಂತ್ರಿ ಹುದ್ದೆಗೆ ಶಿಫಾರಸು ಮಾಡಿದ್ದರು, ಆದರೆ ಹೈಕಮಾಂಡ್ ಸ್ಕೀಮ್ ಬೇರೆಯೇ ಇತ್ತು ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಹೇಳಿದ್ದಾರೆ.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿ ಮಾಡಿದ್ದು ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು, ಸಿದ್ದರಾಮಯ್ಯ ಮತ್ತು ನಾನು ಹಲವು ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ನಾನು 8 ವರ್ಷಗಳ ಕಾಲ ಪಿಸಿಸಿ ಅಧ್ಯಕ್ಷನಾಗಿದ್ದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ. ನಂತರ ನಾನು 2015 ರಲ್ಲಿ ಗೃಹ ಸಚಿವರಾಗಿ ಅವರ ಸಂಪುಟಕ್ಕೆ ಸೇರಿದೆ. 2023 ರಲ್ಲಿ ನಾನು ಅವರ ಮಂತ್ರಿ ಮಂಡಲ ಸೇರಿದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ, ಅವರಿಗೆ ನನ್ನ ಬಗ್ಗೆ ಚೆನ್ನಾಗಿ ತಿಳಿದಿದೆ ಎಂದಿದ್ದಾರೆ.

ನಿನ್ನೆ ಅವರು ನನ್ನನ್ನು ಸಿಎಂ ಹುದ್ದೆಗೆ ಶಿಫಾರಸು ಮಾಡಿದ್ದಾರೆಂದು ಹೇಳಿದ್ದರಲ್ಲಿ ನನಗೆ ಆಶ್ಚರ್ಯವಿಲ್ಲ. ನಾಲ್ಕೈದು ಉಪಮುಖ್ಯ ಮಂತ್ರಿಗಳನ್ನು ಮಾಡುವ ಯೋಜನೆಯಿತ್ತು, ಆದರೆ ಸಿದ್ದರಾಮಯ್ಯ ಅವರು ಕೇವಲ ಒಬ್ಬರಿಗೆ ಡಿಸಿಎಂ ಹುದ್ದೆ ನೀಡಬೇಕೆಂದು ಹೇಳಿ ನನ್ನ ಹೆಸರನ್ನು ಹೈಕಮಾಂಡ್ ಬಳಿ ಶಿಫಾರಸು ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರಕ್ಕೆ ಬರ ಅಧ್ಯಯನಕ್ಕೆ ಮನವಿ ಸಲ್ಲಿಸುವ ವಿಚಾರದ ಬಗ್ಗೆ ಮಾತನಾಡಿದ ಡಿಸಿಎಂ ಪರಮೇಶ್ವರ್, ಕೇಂದ್ರ ಸರ್ಕಾರದ 2020ರ ಮಾರ್ಗಸೂಚಿ ಪ್ರಕಾರವೇ ಬರ ಪೀಡಿತ ಪ್ರದೇಶ ಘೋಷಿಸಬೇಕಾಗುತ್ತದೆ. ಸದ್ಯ 102 ತಾಲೂಕುಗಳಲ್ಲಿ ನಿಯಮದಡಿ ವರದಿ ಬಂದಿದ್ದು, ವಸ್ತುಸ್ಥಿತಿ ಅಧ್ಯಯನ ನಡೆಸಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಸಚಿವ ಸಂಪುಟದಲ್ಲಿ ಚರ್ಚಿಸಿ, ಕೇಂದ್ರಕ್ಕೆ ಅಧಿಕೃತ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ನೂರು ಕೇಸ್ ಸಿಐಡಿಗೆ ಹಸ್ತಾಂತರ ವಿಚಾರದ ಬಗ್ಗೆ ಮಾತನಾಡಿದ ಅವರು, ರೆಗ್ಯೂಲರ್ ಆಗಿ ಇಂಥಾ ಘಟನೆ ಆದಾಗ, ಸರ್ಕಾರಕ್ಕೆ ಅನುಮಾನ, ಡೌಟ್ ಬಂದಾಗ ಅದನ್ನ ಸಿಐಡಿಗೆ ಕೊಡ್ತಾರೆ. ಅದೇ ರೀತಿ ಮಾಡಿದ್ದಾರೆ, ಇದರಲ್ಲಿ ಹೊಸದೇನೂ ಇಲ್ಲ ಎಂದು ಸ್ಪಷ್ಟನೆ ಕೊಟ್ಟರು.

### ಅಚ್ಚರಿ ಮೂಡಿಸಿದ ಸಿದ್ದರಾಮಯ್ಯ ಹೇಳಿಕೆ



ಬೆಂಗಳೂರು: ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿ ಮಾಡಿದ್ದು ಯಾರು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಗಾಂಧಿ ಭವನದಲ್ಲಿ ನಡೆದ 'ಒಳ ಮೀಸಲಾತಿ ಕುರಿತ ವಿಚಾರ ಸಂಕಿರಣ'ದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಹೇಳಿಕೆಯೊಂದು ರಾಜಕೀಯ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿದೆ.

ಕಾರ್ಯಕ್ರಮದಲ್ಲಿ ಸಭಿಕರೊಬ್ಬರು ದಲಿತ ಸಿಎಂ ವಿಚಾರವನ್ನು ಪ್ರಸ್ತಾಪಿಸಿದರು. ಇದರಿಂದ ಕೊಂಚ ಭಾವೋದ್ವೇಗಕ್ಕೊಳಗಾದ ಸಿದ್ದರಾಮಯ್ಯ, ಪರಮೇಶ್ವರ್ ಅವರನ್ನು ಡಿಸಿಎಂ ಮಾಡಿದ್ದು ಯಾರು? ಆರಂಭದಲ್ಲಿ ನಾಲ್ಕೈದು ಜನರನ್ನು ಡಿಸಿಎಂ ಮಾಡುವ ಯೋಜನೆಯಿತ್ತು. ಆದರೆ, ಒಬ್ಬರಿಗಷ್ಟೇ ಡಿಸಿಎಂ ಹುದ್ದೆ ನೀಡಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರಿ ಪರಮೇಶ್ವರ್ ಅವರನ್ನು ಡಿಸಿಎಂ ಮಾಡಿಸಿದ್ದು ನಾನೇ ಎಂದು ನೇರವಾಗಿ ಹೇಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

# ಆಲಮಟ್ಟಿ-ಯಾದಗೀರ ರೈಲ್ವೇ ಮಾರ್ಗದ ಸರ್ವೇ ಕಾರ್ಯಕ್ಕೆ ಟೆಂಡರ್

■ ಉದಯರಶ್ಮಿ ದಿನಪತ್ರಿಕೆ



ಒಟ್ಟು 4500 ಕೋಟಿ ರೂ. ಮೊತ್ತದ ಯೋಜನೆ | ವಿಜಯಪುರ ಸಂಸದ ರಮೇಶ ಜಿಗಜಿಣಗಿ ಮಾಹಿತಿ

ವಿಜಯಪುರ: ತಾಳಿಕೋಟೆ, ಯಾದಗೀರ ಸುತ್ತಮುತ್ತಲಿನ ಜನತೆಯ ಅನೇಕ ದಶಕಗಳ ಬೇಡಿಕೆಯಾಗಿರುವ ಆಲಮಟ್ಟಿ ಯಾದಗೀರ ರೈಲ್ವೇ ಮಾರ್ಗಕ್ಕೆ ಸಂಬಂಧಿಸಿದಂತೆ 4.5 ಕೋಟಿ ರೂ. ವೆಚ್ಚದಲ್ಲಿ ಸರ್ವೇ ಕಾರ್ಯ ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ ಎಂದು ಸಂಸದ ರಮೇಶ ಜಿಗಜಿಣಗಿ ಮಾಹಿತಿ ನೀಡಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಆಲಮಟ್ಟಿಯಿಂದ ಯಾದಗೀರಿ 162 ಕೀ.ಮೀ. ದೂರದ ರೈಲ್ವೇ ಮಾರ್ಗಕ್ಕೆ ಈಗ ಪ್ರಥಮ ಹಂತವಾಗಿ ಸರ್ವೇ ಕಾರ್ಯಕ್ಕೆ 4.5 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ, ಇದು ಒಟ್ಟು 4500 ಕೋಟಿ ರೂ. ಮೊತ್ತದ ಯೋಜನೆಯಾಗಿದೆ ಎಂದು ಜಿಗಜಿಣಗಿ ಮಾಹಿತಿ ನೀಡಿದ್ದಾರೆ.

ಬ್ರಿಟಿಷರ ಕಾಲದಿಂದಲೂ ಈ ರೈಲ್ವೇ ಮಾರ್ಗದ ಬೇಡಿಕೆ ಇತ್ತು. ತಾಳಿಕೋಟೆ, ಯಾದಗೀರಿ ಸೇರಿದಂತೆ ಅನೇಕ ಭಾಗದ ಜನರು ಈ ರೈಲ್ವೇ ಮಾರ್ಗಕ್ಕೆ ಬೇಡಿಕೆ ಇರಿಸಿದ್ದರು, ಅನೇಕ ಹಂತದ ಹೋರಾಟ ಸಹ ನಡೆಸಿದ್ದರು. ಅನೇಕ ಗ್ರಾಮಗಳ ನಿವಾಸಿಗಳ ನಿಯೋಗ ಸಹ ನವದೆಹಲಿಗೆ ಬಂದಿತ್ತು. ನಾನು ಸ್ವತಃ ಕೇಂದ್ರ ರೈಲ್ವೇ ಸಚಿವರನ್ನು ಭೇಟಿ ಮಾಡಿಸಿದ್ದೆ, ಈಗ ಜನತೆಯ ಅನೇಕ ಹೋರಾಟ ಹಾಗೂ ನನ್ನ ಪ್ರಯತ್ನ ಫಲವಾಗಿ ಈಗ ಈ ಮಹತ್ವದ ಯೋಜನೆಗೆ ಕೇಂದ್ರ ಸರ್ಕಾರ ಅಸ್ತು ಎಂದಿದೆ. ಈಗ ಈ ಜಾಲದ ಸರ್ವೇ ಕಾರ್ಯದ 4.5 ಕೋಟಿ ರೂ. ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ ಎಂದು ಜಿಗಜಿಣಗಿ ಹೇಳಿದ್ದಾರೆ.

# ಶಾಶ್ವತ ಗಣೇಶ ವಿಸರ್ಜನೆ ಹೊಂಡ ನಿರ್ಮಾಣಕ್ಕೆ ಕ್ರಮ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರ ವ್ಯಾಪ್ತಿಯಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಅಗತ್ಯಕ್ಕೆ ತಕ್ಕಂತೆ ಗಣೇಶ ಮೂರ್ತಿಗಳ ವಿಸರ್ಜನೆಗಾಗಿ ಶಾಶ್ವತ ಹೊಂಡ ನಿರ್ಮಿಸಲು ಸೂಕ್ತ ಇರುವುದರಿಂದ, ನಗರದ ಬೇರೆ ಬೇರೆ ಸೂಕ್ತ ಸ್ಥಳಗಳಲ್ಲಿ ಶಾಶ್ವತ ಹೊಂಡ ನಿರ್ಮಿಸುವ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ಗಜಾನನ ಮಹಾಮಂಡಳದ ಪದಾಧಿಕಾರಿಗಳು

ಜಾಗ ಗುರುತಿಸಿ, ಸ್ಥಳ ವೀಕ್ಷಣೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯಲ್ಲಿ 2026-27ನೇ ಸಾಲಿನ ಗಣೇಶೋತ್ಸವದ ಹಿನ್ನೆಲೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ ನಗರದ ವಿವಿಧ ಗಜಾನನ ಮಹಾಮಂಡಳಿಗಳು, ಜನಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಜಯಪುರ ನಗರದ ಐತಿಹಾಸಿಕ ಸ್ಮಾರಕವಾದ ತಾಸಬಾವಡಿಯನ್ನು ಪ್ರಸ್ತುತ ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ ಸಂಸ್ಥೆಯು ಪುನರುಜ್ಜೀವನಗೊಳಿಸುತ್ತಿದೆ. ಈ ಹಿನ್ನೆಲೆಯಲ್ಲಿ ತಾಸಬಾವಡಿಯಲ್ಲಿ ವಿಸರ್ಜನಾ ಹೊಂಡ ನಿರ್ಮಿಸಿದರೆ ಸ್ಥಳಾವಕಾಶ ಕಡಿಮೆಯಾಗುವ ಸಾಧ್ಯತೆ

ಹಾಗೂ ಅಧಿಕಾರಿಗಳ ಜಂಟಿ ತಂಡವು ಆಗಸ್ಟ್ 27 ರಂದು ನಗರದ ವಿವಿಧ ಜಾಗಗಳಿಗೆ ಭೇಟಿ ನೀಡಿ, ಸ್ಥಳ ವೀಕ್ಷಣೆ ನಡೆಸಲಿದೆ. ಸೂಕ್ತ ಸ್ಥಳವನ್ನು ಅಂತಿಮವಾಗಿ ಗುರುತಿಸಿದ ನಂತರ, ಈ ವಿಷಯವನ್ನು ವಿಜಯಪುರ ಮಹಾನಗರ ಪಾಲಿಕೆಯ ಮುಂಬರುವ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಸಭೆ ತೀರ್ಮಾನಿಸಿತು.

ಈ ಸಭೆಯಲ್ಲಿ ಮಾಜಿ ಸಚಿವರಾದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಹಾನಗರ ಪಾಲಿಕೆ ಮೇಯರ್ ಎಂ. ಎಸ್. ಕರಡಿ, ಉಪ ಮೇಯರ್ ಶ್ರೀಮತಿ ಸುಮಿತ್ರಾ ಜಾಧವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಪಾಲಿಕೆಯ ಎಲ್ಲಾ ಗೌರವಾನ್ವಿತ ಸದಸ್ಯರು ಹಾಗೂ ನಗರದ ಗಜಾನನ ಮಹಾಮಂಡಳದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಿಜಯಪುರದ ಭೂತನಾಳ ಕೆರೆಯಲ್ಲಿ ನಡೆದ ಹೃದಯವಿದ್ರಾವಕ ದುರ್ಘಟನೆ

# ಐವರು ಮಕ್ಕಳೊಂದಿಗೆ ಕೆರೆಗೆ ಹಾರಿ ಸಾವಿಗೆ ಶರಣಾದ ತಾಯಿ!



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಆದರ್ಶನಗರ ಠಾಣೆ ವ್ಯಾಪ್ತಿಯ ಭೂತನಾಳ ಕೆರೆಯಲ್ಲಿ 6 ಜನರು ನೀರಲ್ಲಿ ಮುಳುಗಿ ಮರಣ ಹೊಂದಿದ ಹೃದಯವಿದ್ರಾವಕ ದುರ್ಘಟನೆ ಜರುಗಿದೆ.

ಬುಧವಾರ ಕೆರೆಯ ಅಂಚಿನಲ್ಲಿ ಶವಗಳು ತೇಲಿ ಬಂದಿರುವುದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮಾಹಿತಿ ತಿಳಿದು ಸ್ಥಳಕ್ಕೆ ನಗರ ಡಿವೈಎಸ್ಪಿ ನಾಗರಾಜ್, ಆದರ್ಶ ನಗರ ಪೊಲೀಸ್ ಠಾಣೆಯ ಪಿಎಸ್ಐ ಸೀತಾರಾಮ ಲಮಾಣಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಕೆರೆಯಿಂದ ಶವಗಳನ್ನು ಹೊರತೆಗೆಯುವ ಕಾರ್ಯಾಚರಣೆ ನಡೆಸಿದ್ದಾರೆ.

ಮೃತರು ನಗರದ ಹೊರವಲಯದ ತೊರವಿ ಗ್ರಾಮದ ಶಾಂತಿ ನಗರದ ನಿವಾಸಿಗಳಾಗಿದ್ದು ಶೋಭಾ ಗಂ. ಮಲ್ಲಿಕಾರ್ಜುನ ಜಾಲಗೇರಿ (35) ಎಂಬ ಮಹಿಳೆ ತನ್ನ ಐದು ಮಕ್ಕಳಾದ ವಿದ್ಯಾ (15), ಸುವರ್ಣಾ (13), ತಿಪ್ಪರಾಯ (12), ಸಾನಿಕಾ (10) ಮತ್ತು ವಿಕಾಶ (6) ಎಂದು ತಿಳಿದುಬಂದಿದೆ.

ಕೌಟುಂಬಿಕ ಕಲಹವೇ ಈ ದುರಂತಕ್ಕೆ ಕಾರಣ ಎನ್ನಲಾಗುತ್ತಿದ್ದು, ಘಟನೆಯ ಕುರಿತು ತನಿಖೆ ಮುಂದುವರೆದಿದೆ.

### ಮೃತಳ ಗಂಡನಿಂದ ದೂರು ದಾಖಲು

ಮೃತಳಾದ ಶೋಭಾ ಜಾಲಗೇರಿ ಇವಳ ಪತಿ ಮಲ್ಲಿಕಾರ್ಜುನ ಭೀಮಸಿ ಜಾಲಗೇರಿ ಈತನು ತನ್ನ ಪತ್ನಿ ಶೋಭಾಗೆ ಪ್ರಾಪಂಚಿಕ ವಿಷಯವಾಗಿ ಬುದ್ದಿವಾದ ಹೇಳಿದ್ದಕ್ಕೆ ಕೋಪಗೊಂಡು ತನ್ನ ಮಕ್ಕಳನ್ನು ಕರೆದುಕೊಂಡು ಮನೆಯಿಂದ ಹೋದ ಬಗ್ಗೆ ದಿನಾಂಕ: 24-08-2026 ರಂದು ವಿಜಯಪುರ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಕಾಣೆಯಾದ ಕುರಿತು ದೂರು ನೀಡಿ ಪ್ರಕರಣ ದಾಖಲಿಸಿದ್ದನೆಂದು ತಿಳಿದುಬಂದಿದೆ.

# ಆದೇಶವಿದ್ದರೂ ನಿಯಮ ಪಾಲಿಸದ ಸಾರಿಗೆ ಸಿಬ್ಬಂದಿ : ಆರೋಪ

## ಬಳ್ಳೊಳ್ಳಿಯಲ್ಲಿ ಬಸ್‌ಗಳ ನಿಲುಗಡೆಗೆ ಸಾರಿಗೆ ಇಲಾಖೆಯ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಹಿಂದಿನ ಸರ್ಕಾರದ ಸಾರಿಗೆ ಸಚಿವರಾಗಿದ್ದ ಶ್ರೀರಾಮುಲು ಅವರು ಇಂಡಿ ತಾಲೂಕಿನ ಬಳ್ಳೊಳ್ಳಿ ಗ್ರಾಮದಲ್ಲಿ ಸಾರಿಗೆ ಇಲಾಖೆಯ ಎಲ್ಲ ಘಟಕಗಳ ಬಸ್‌ಗಳು ನಿಲುಗಡೆ ಮಾಡುವಂತೆ ಆದೇಶ ನೀಡಿದ್ದರೂ, ಸಾರಿಗೆ ಇಲಾಖೆ ಮಾತ್ರ ಆದೇಶವನ್ನು ಸಮರ್ಪಕವಾಗಿ ಪಾಲಿಸುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಬಳ್ಳೊಳ್ಳಿ ಗ್ರಾಮಕ್ಕೆ ವಿಜಯಪುರ ಘಟಕದ ಕೆಲವೇ ಕೆಲವು ಬಸ್‌ಗಳು ಮಾತ್ರ ಸೇತುವೆ ಕೆಳಗಡೆ ಬಂದು ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗುತ್ತಿವೆ. ಆದರೆ ಚಿತ್ರದುರ್ಗ, ಹಳಿಯಾಳ, ಬೆಳಗಾವಿ ಸೇರಿದಂತೆ ವಿವಿಧ ಘಟಕಗಳ ಬಸ್‌ಗಳು ಗ್ರಾಮದ ಸೇತುವೆ ಕೆಳಗಡೆ ಬಂದು ನಿಲ್ಲಿಸುತ್ತಿಲ್ಲ. ಕೆಲ ಬಸ್‌ಗಳು ಸೇತುವೆ ಮೇಲೆ ಪ್ರಯಾಣಿಕರು ನಿಂತರೂ ಕಂಡು ಕಾಣದಂತೆ ಬಸ್ ನಿಲ್ಲಿಸದೆ ಪ್ರಯಾಣಿಕರನ್ನು ಕಡೆಗಣಿಸುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಬಳ್ಳೊಳ್ಳಿ ಗ್ರಾಮವು ಹೋಬಳಿ ಮಟ್ಟದ ಪ್ರಮುಖ ಕೇಂದ್ರವಾಗಿದ್ದು, ಇಲ್ಲಿ ನಾಡಕಚೇರಿ, ಸರ್ಕಾರಿ ಶಾಲೆಗಳು, ಕಾಲೇಜು, ರಾಷ್ಟ್ರೀಕೃತ ಬ್ಯಾಂಕ್, ಆಸ್ಪತ್ರೆ ಸೇರಿದಂತೆ ವಿವಿಧ ಸರ್ಕಾರಿ ಹಾಗೂ ಸಾರ್ವಜನಿಕ ಸೇವಾ ಸಂಸ್ಥೆಗಳಿವೆ. ಪ್ರತಿದಿನ ನೂರಾರು ವಿದ್ಯಾರ್ಥಿಗಳು, ಶಿಕ್ಷಕರು, ಸರ್ಕಾರಿ ನೌಕರರು ಹಾಗೂ ಸಾರ್ವಜನಿಕರು ವಿವಿಧ ಕೆಲಸಗಳಿಗಾಗಿ ಗ್ರಾಮಕ್ಕೆ ಆಗಮಿಸುತ್ತಾರೆ. ಆದರೆ ಬಸ್‌ಗಳು ಗ್ರಾಮದೊಳಗೆ ಸರಿಯಾಗಿ ಬಂದು ನಿಲ್ಲಿಸದಿರುವುದರಿಂದ ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಸಾರಿಗೆ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕರು ಕೂಡಲೇ ಮಧ್ಯಪ್ರವೇಶಿಸಿ, ಎಲ್ಲ ಘಟಕಗಳ ಬಸ್‌ಗಳು ಬಳ್ಳೊಳ್ಳಿ ಗ್ರಾಮದ ಸೇತುವೆ ಕೆಳಗಡೆ ಬಂದು ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ನಿಲುಗಡೆ ಮಾಡುವಂತೆ ಆದೇಶ ನೀಡಿ ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಅಂಗನವಾಡಿ ಕಾಂಪೌಂಡನ್ನೇ ನುಂಗಿದ ಪವಾಡ ಪುರುಷರು

## ಕಾಗದದ ಮೇಲೆ ಭದ್ರಕೋಟೆ, ಸ್ಥಳದಲ್ಲಿ ಮಾತ್ರ ಬರೀ ಬಯಲು | ಸುಮಾರು ರೂ.3 ಲಕ್ಷ ಗುಳುಂ ಮಾಡಿದ ನುಂಗಣ್ಣರು | ಕ್ರಮಕ್ಕೆ ಗ್ರಾಮಸ್ಥರ ಆಗ್ರಹ

■ ಉದಂ ತರಶ್ಮಿ ದಿನಪತ್ರಿಕೆ

■ ವಿಶೇಷ ವರದಿ



ಅಫಜಲಪುರ: 'ಕೊಡಗನ ಕೋಳಿ ನುಂಗಿತ್ತ.. ನೋಡವ್ವ ತಂಗಿ..' ಎಂಬ ಶರೀಫಜ್ಜನ ಹಾಡನ್ನು ಕೇಳಿರುತ್ತೀರಿ. ಆದರೆ ಇಲ್ಲೊಂದು ಕಡೆ ಅದಕ್ಕಿಂತ ರೋಚಕವಾದ ಕಳ್ಳಾಟದ ಪವಾಡ ನಡೆದಿದೆ.

ಪುಟ್ಟ ಮಕ್ಕಳು ಆಟವಾಡುವ ಅಫಜಲಪುರ ತಾಲೂಕಿನ ಚಿಂಚೋಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ರಕ್ಷಣೆ ನೀಡಬೇಕಿದ್ದ ಕಾಂಪೌಂಡ್ ಗೋಡೆಯನ್ನೇ ಗುತ್ತಿಗೆದಾರ ಮತ್ತು ಇಂಜಿನಿಯರ್ ಸೇರಿ ನುಂಗಿ ನೀರು ಕುಡಿದಿದ್ದಾರೆ!

ಕಾಂಪೌಂಡ್ ನಿರ್ಮಾಣಕ್ಕೆ ಸರ್ಕಾರ ಬಿಡುಗಡೆ ಮಾಡಿದ್ದ ರೂ. 3 ಲಕ್ಷ ಅನುದಾನವನ್ನು, ಸ್ಥಳದಲ್ಲಿ ಒಂದು ಇಟ್ಟಿಗೆಯನ್ನೂ ಇಡದೆ, ಕಾಮಗಾರಿ ಸಂಪೂರ್ಣ ಮುಗಿದಿದೆ ಎಂದು ಬಿಲ್ ಸೃಷ್ಟಿಸಿ ಹಣ ಡ್ರಾ ಮಾಡಿಕೊಂಡಿರುವ ಕರ್ಮಕಾಂಡ ಬಯಲಾಗಿದೆ.

**ದಾಖಲೆಯಲ್ಲಿ ಭದ್ರಗೋಡೆ, ಸ್ಥಳದಲ್ಲಿ ಶೂನ್ಯ! ಕಾಗದದಲ್ಲೇ ಮುಗಿದ ಕೆಲಸ**

ಇಲಾಖೆಯ ಕಡತಗಳ ಪ್ರಕಾರ ಅಂಗನವಾಡಿಗೆ ಸುತ್ತಲೂ ಸುಭದ್ರ ಕಾಂಪೌಂಡ್ ಗೋಡೆ ಎದ್ದು ನಿಂತಿದೆ, ಬಣ್ಣ ಬಳಿಯಲಾಗಿದೆ. ಆದರೆ ಸ್ಥಳಕ್ಕೆ ಹೋಗಿ ನೋಡಿದರೆ ವಾಸ್ತವ ಸ್ಥಿತಿ ಭಿನ್ನವಾಗಿದೆ. ಅಲ್ಲಿ ಹೊಸ ಕಾಂಪೌಂಡಿನ ಸುಳಿವೂ ಇಲ್ಲ. ಬೀದಿನಾಯಿಗಳು ಮತ್ತು ದನಕರುಗಳ ನಡುವೆಯೇ ಮಕ್ಕಳು ಹೆದರುತ್ತ ಆಟವಾಡಬೇಕಾದ ದುಸ್ಥಿತಿ ಇದೆ.

**ಗುತ್ತಿಗೆದಾರ-ಇಂಜಿನಿಯರ್ 'ಜುಗಲ್‌ಬಂದಿ'**

ಸ್ಥಳ ಪರಿಶೀಲನೆ ಮಾಡಬೇಕಿದ್ದ ಸಂಬಂಧಪಟ್ಟ ಇಂಜಿನಿಯರ್, ಕಚೇರಿಯಲ್ಲೇ ಕುಳಿತು ಕಾಮಗಾರಿ ಗುಣಮಟ್ಟದಿಂದ ಕೂಡಿದೆ ಎಂದು ಪ್ರಮಾಣಪತ್ರ ನೀಡಿದ್ದರೆ, ಇತ್ತ ಗುತ್ತಿಗೆದಾರ ಕೆಲಸ ಮಾಡದೆಯೇ ಬಿಲ್ ಕ್ಲೈಮ್ ಮಾಡಲು ಇಂಜಿನಿಯರ್ ಸಂಪೂರ್ಣ ಸಹಕಾರ ನೀಡಿದ್ದು, ರೂ. 3 ಲಕ್ಷ ಸಾರ್ವಜನಿಕರ ತೆರಿಗೆ ಹಣ ಇಬ್ಬರ ಜೇಬು ಸೇರಿರ ಬಹುದಾದ ಶಂಕೆ ತಲೆದೋರಿದೆ.

**ಸಾರ್ವಜನಿಕರ ಆಕ್ರೋಶ:**

ಅಂಗನವಾಡಿ ಕಂದಮ್ಮಗಳ ರಕ್ಷಣೆಗೆಂದು ಬಂದ ಪುಟ್ಟ ಮೊತ್ತವನ್ನೂ ಬಿಡದೆ ಲೂಟಿ ಹೊಡೆದಿದ್ದಾರೆನ್ನಲಾದ ಈ ಜೋಡಿಯ ವಿರುದ್ಧ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಲು ಆಗ್ರಹಿಸಿದ್ದಾರೆ.

ಸರ್ಕಾರದ ಯೋಜನೆಗಳನ್ನು ನುಂಗಿ ತೇಗುವ ಇಂತಹ 'ಕೋಡಗರಿಗೆ' ಮೇಲಧಿಕಾರಿಗಳು ಕಠಿಣ ಕಾನೂನಿನ ಬಿಸಿ ಮುಟ್ಟಿಸುತ್ತಾರಾ ಅಥವಾ ದಾಖಲೆಗಳಂತೆಯೇ ತನಿಖೆಯೂ ಕಾಗದದಲ್ಲೇ ಮುಗಿಯುತ್ತಾ ಎಂಬುದನ್ನು ಕಾದು ನೋಡಬೇಕಿದೆ.

"ಮಕ್ಕಳ ಅನ್ನದ ತುತ್ತಿಗೆ ಕನ್ನ ಹಾಕಿದಂತೆ, ಅವರ ಸುರಕ್ಷತೆಯ ಕಾಂಪೌಂಡ್ ಹಣವನ್ನು ಲಪಟಾಯಿಸಿರುವ ಇಂಜಿನಿಯರ್ ಮತ್ತು ಗುತ್ತಿಗೆದಾರನನ್ನು ತಕ್ಷಣ ಅಮಾನತುಗೊಳಿಸಿ, ಕ್ರಿಮಿನಲ್ ಮೊಕದ್ದಮೆ ಹೂಡಿ ಹಣ ವಸೂಲಿ ಮಾಡಬೇಕು."

■ ಚಂದ್ರಕಾಂತ್ ಮದರಿ
ಮಾಜಿ ಗ್ರಾಪಂ ಸದಸ್ಯರು, ಚಿಂಚೋಳಿ

# ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರವರ ಕಛೇರಿ,
# ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟ

## ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರ ಕಲಂ 11(1)ರ ಮೇರೆಗೆ ಅಧಿಸೂಚನೆ

**ಸಂ:ವಿಜಿಬಾ/ಭೂಸ್ವಾ/ಸಿಆರ್–77/2026–27** **ದಿನಾಂಕ: 21–07–2026**

ಸಾರ್ವಜನಿಕ ಉದ್ದೇಶದ (ನೀರಾವರಿ ಯೋಜನೆಗಾಗಿ) **ಅಂದರೆ, ಮುಳವಾಡ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಸಂಕನಾಳ ಬ್ರಾಂಚ್ ಕಾಲುವೆಯ ಡಿಸ್ಟ್ರಿಬ್ಯೂಟರಿ 6ರಲ್ಲಿ–ಚೈ–4.312 ಕಿ.ಮೀ. ರಿಂದ ಚೈ–5.067 ಕಿ.ಮೀ.ವರೆಗೆ ಮತ್ತು ಲ್ಯಾಟರಲ್–5ರ ಡಿಸ್ಟ್ರೀಬ್ಯೂಟರಿ8ರಲ್ಲಿ–ಚೈ–0.605 ಕಿ.ಮೀ. ರಿಂದ ಚೈ –3.010ಕಿ.ಮೀ.ವರೆಗೆ, ಮತ್ತು ಸಬ್ ಲ್ಯಾಟರಲ್–1ರ, ಲ್ಯಾಟರಲ್–5ರ ಡಿಸ್ಟ್ರೀಬ್ಯೂಟರಿ8ರಲ್ಲಿ–ಚೈ–0.275 ಕಿ.ಮೀ. ರಿಂದ ಚೈ–2.182 ಕಿ.ಮೀ.ವರೆಗೆ, ಕಾಲುವೆ ನಿರ್ಮಾಣಕ್ಕಾಗಿ ವಿಜಯಪುರ ಜಿಲ್ಲೆಯ ಬ.ಬಾಗೇವಾಡಿ ತಾಲೂಕಿನ ಅಗಸಬಾಳ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ** ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013(2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಹಾಗೂ ಪನರ್ ನಿವರ್ಾಣ ಕರ್ನಾಟಕ ತಿದ್ದುಪಡಿ)ಕಾಯ್ದೆ–2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II ಮತ್ತು IIIರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ ಕಂಇ 04 ಎಕ್ಯೂಬಿ 2020 ದಿನಾಂಕ:28–03–2022ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ:28–03–2022ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ –2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಆಲಮಟ್ಟಿ ಇವರಿಗೆ ಮತ್ತು ಪುನರ್ವಸತಿ ಮತ್ತು ಪುನರ್ವವಸ್ಥೆಯ ಅಧಿಕಾರ ಚಲಾಯಿಸುವಂತೆ ಪುನರ್ವಸತಿ ಅಧಿಕಾರಿಗಳು, ಆಲಮಟ್ಟಿ, ಇವರಿಗೆ ಆದೇಶ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ, ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ:30) ರ ಕಲಂ 11(1)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿ ಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನರ್ವಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ.30)ರ ಕಲಂ–15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪ ವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು, ತದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವದು,

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ಭೂಸ್ವಾಧೀನಾಧಿಕಾರಿಗಳು, ಕ್ರಮೇಯೋ, ಆಲಮಟ್ಟಿ, ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

**ಸಂ.ಎಲ್‌ಎಕ್ಯೂ:ಎಸ್‌ಆರ್–02/2026–27**

## ಅನುಸೂಚಿ

**ಗ್ರಾಮ: ಅಗಸಬಾಳ** **ಹೋಬಳಿ: ಹೂ.ಹಿಪ್ಪರಗಿ**

**ತಾಲ್ಲೂಕು: ಬ.ಬಾಗೇವಾಡಿ** **ಜಿಲ್ಲೆ: ವಿಜಯಪುರ**

| ಅ. ನಂ. | ಖಾತೆದಾರರ ಹೆಸರು /ಅನುಭವದಾರರ ಹೆಸರು | ಸರ್ವೆ ನಂಬರು | ಜಮೀನಿನ ತರಹೆ | ಭೂಸ್ವಾಧೀನ ಕ್ಷೇತ್ರ ಎ–ಗುಂ. |
|---|---|---|---|---|
| 1 | 2 | 3 | 4 | 5 |
| | **ಡಿಸ್ಟ್ರೀಬ್ಯೂಟರಿ 6ರಲ್ಲಿ ಚೈ–4.312 ಕಿ.ಮೀ. ರಿಂದ ಚೈ–5.067 ಕಿ.ಮೀ.ವರೆಗೆ** | | | |
| 1 | ನಂದಬಾಯಿ ಗಂ.ಸಂಜೀವರಾವ ಉರ್ಫ<br>ಸಂಜೀವಬಾಯಿ ಜೋಶಿ, ಅಂಜಿನಾ ಗಂ. ದತ್ತಾತ್ರೇಯ<br>ಜೋಶಿ, ಅರ್ಚನಾ ಉರ್ಫ ಪಿಂಕು ಗಂ.ಪ್ರೇಮಕುಮಾರ,<br>ತೃಪ್ತಿ ಸಂಜೀವರಾವ ಉರ್ಫ ಸಂಜೀವಬಾಯಿ ಜೊಶಿ,<br>ಪದ್ಮಾವತಿ ಗಂ.ವೆಂಕಟೇಶ ಜೋಶಿ, ಕೇತನ ತಂ.<br>ವೆಂಕಟೇಶ ಜೋಶಿ, ಜ್ಯೋತಿ ಗಂ.ಅಶ್ವಿನ, ಶ್ಯಾಮರಾವ<br>ತಂ.ರಂಗಬಟ್ಟ ಜೋಶಿ ವಗೈರೆ, ಮಂಜುಳಾ ಗಂ.<br>ಪ್ರಲ್ಹಾದ ಜೋಶಿ, ಸ್ಮಿತಾ ಗಂ.ಸತೀಶ ದೇಶಪಾಂಡೆ<br>, ವೀಣಾ ಗಂ.ರಂಗನಾಥ ನಾಡಿಗ, ನಿತೀಶ ತಂ.ಪ್ರಲ್ಹಾದ<br>ಜೋಶಿ, ರಾಜೇಂದ್ರ ಪರಿಮಳ ಜೋಶಿ,<br>ಕೇರ್ ಆಫ್:ವಸಂತ್ ಜೋಶಿ, ವೈಷ್ಣವಿ ವಿ ಜೋಶಿ,<br>––D/o ವಸಂತ್ ಜೋಶಿ, ವೈಶಾಖ್ ವಿ ಜೋಶಿ<br>– S/o ವಸಂತ ಜೋಶಿ | 108/1 | ಖುಷ್ಕಿ | 0–21 |
| 2 | ಮಲ್ಲಪ್ಪ ತಂ.ಶಿವಪ್ಪ ಬಣಗಾರ | 107/1 | ಖುಷ್ಕಿ | 0–30 |
| | ಕಾಲಪ್ಪ ತಂದೆ ಶೆಟ್ಟೆಪ್ಪ ಬಣಗಾರ ಬಿನ್ ಶೆಟ್ಟೆಪ್ಪ | 107/2 | ಖುಷ್ಕಿ | |
| | ಲಕ್ಕವ್ವ ಗಂ.ಈಶ್ವರಪ್ಪ ಬಣಗಾರ,<br>ಬಾಬು ತಂ.ಈಶ್ವರಪ್ಪ ಬಣಗಾರ,<br>ಶಿವಪ್ಪ ತಂ. ಈಶ್ವರಪ್ಪ ಬಣಗಾರ | 107/3 | ಖುಷ್ಕಿ | |
| | ಭೀಮಪ್ಪ ತಂ.ಯಲ್ಲಪ್ಪ ಬಣಗಾರ | 107/5 | ಖುಷ್ಕಿ | |
| 3 | ಪವನಕುಮಾರ ತಂ.ರಾಯವ್ವ ಬಣಗಾರ | 106/1 | ಖುಷ್ಕಿ | 0–11 |
| | ಶ್ರೀಶೈಲ ತಂದೆ ಕಮಲವ್ವ ಬಣಗಾರ ಬಿನ್ ಕಮಲವ್ವ | 106/2 | ಖುಷ್ಕಿ | |
| | ಸುದೀಪ ತಂ.ಬಸವರಾಜ ಬಣಗಾರ | 106/3 | ಖುಷ್ಕಿ | |
| | ವಾರೇಪ್ಪ ತಂ.ಹಣಮಪ್ಪ ಬಣಗಾರ | 106/4 | ಖುಷ್ಕಿ | |
| 4 | ಗಂಗಾಬಾಯಿ ಗಂ.ಯಮನಪ್ಪ ಬಣಗಾರ,<br>ಶಿವಮ್ಮ ಗಂ.ಯಮನಪ್ಪ ಕೋಲಕಾರ,<br>ಯಲ್ಲವ್ವ ಗಂ.ಈರಣ್ಣ ಕೋಲಕಾರ,<br>ಈರಣ್ಣ ಯಮನಪ್ಪ ಬಣಗಾರ,<br>ಮಾಧುರಿ ಗಂ.ಯಮನಪ್ಪ ಬಣಗಾರ,<br>ಶಾಂತಾ ಗಂ. ಶ್ರೀಶೈಲ ಕೋಲಕಾರ,<br>ಭೀಮಾ ತಂ.ಯಮನಪ್ಪ ಬಣಗಾರ,<br>ಮಂಜುನಾಥ ತಂ.ಯಮನಪ್ಪ ಬಣಗಾರ,<br>ರೇಣುಕಾ ರಾಜು ಕೋಲಕಾರ, ಲಕ್ಷ್ಮೀ ಸಂತೋಷ<br>ತಳವಾರ, ಚನ್ನಮ್ಮ ಪರಶುರಾಮ ಬಣಗಾರ,<br>ಪೂಜಾ ಪರಶುರಾಮ ಬಣಗಾರ, ಪ್ರವೀಣ | 105/* | ಖುಷ್ಕಿ | 0–15 |
| 1 | 2 | 3 | 4 | 5 |
| | ಪರಶುರಾಮ ಬಣಗಾರ, ಅಶೋಕ ಪರಶುರಾಮ<br>ಬಣಗಾರ, ಅ ಪಾ ತಾ ಚನ್ನಮ್ಮ, ಮಾಧುರಿ ಗಂ.<br>ಯಮನಪ್ಪ ಬಣಗಾರ, ದಕ್ಷಿಣಕ್ಕೆ, ಶಾಂತಾ ಗಂ.ಶ್ರೀಶೈಲ<br>ಕೋಲಕಾರ, ಭೀಮಾ ತಂ.ಯಮನಪ್ಪ ಬಣಗಾರ,<br>ಮಂಜುನಾಥ ತಂ.ಯಮನಪ್ಪ ಬಣಗಾರ,<br>ರೇಣುಕಾ ರಾಜು ಕೋಲಕಾರ, ಲಕ್ಷ್ಮೀ ಸಂತೋಷ<br>ತಳವಾರ, ಚನ್ನಮ್ಮ ಪರಶುರಾಮ ಬಣಗಾರ,<br>ಪೂಜಾ ಪರಶುರಾಮ ಬಣಗಾರ, ಪ್ರವೀಣ<br>ಪರಶುರಾಮ ಬಣಗಾರ, ಅಶೋಕ ಪರಶುರಾಮ<br>ಬಣಗಾರ, ಅಪಾತಾ ಚನ್ನಮ್ಮ | | | |
| 5 | ಸಾದೇವಪ್ಪ ಶಿವಪ್ಪ ವಾಲೀಕಾರ | 104/* | ಖುಷ್ಕಿ | 0–25 |
| 6 | ಕಾಲವ್ವ ಯಮನಪ್ಪ ವಾಲೀಕಾರ | 103/1 | ಖುಷ್ಕಿ | 0–30 |
| | ಶರಣಬಸಪ್ಪ ಯಮನಪ್ಪ ವಾಲಿಕಾರ | 103/2 | ಖುಷ್ಕಿ | |
| | ಶಿದ್ದಪ್ಪ ಯಮನಪ್ಪ ವಾಲಿಕಾರ | 103/3 | ಖುಷ್ಕಿ | |
| | ಹೊನ್ನಪ್ಪ ಯಮನಪ್ಪ ವಾಲಿಕಾರ | 103/4 | ಖುಷ್ಕಿ | |
| 7 | ಯಮನಪ್ಪ ಕಾಲವ್ವ ವಾಲೀಕಾರ | 102/1 | ಖುಷ್ಕಿ | 0–16 |
| | ಶ್ರೀದೇವಿ ಗಂ.ಹೊನ್ನಪ್ಪ ವಾಲಿಕಾರ | 102/2 | ಖುಷ್ಕಿ | |
| | ಲಕ್ಷ್ಮಣ ತಂ.ಹೊನ್ನಪ್ಪ ವಾಲಿಕಾರ | | | |
| | ಶಿವಪ್ಪ ತಂ.ಲಕ್ಷ್ಮಣ ವಾಲೀಕಾರ | | | |
| | ಬೋರಮ್ಮ ಗಂ.ಕಾಲಪ್ಪ ವಾಲಿಕಾರ<br>ಅಶೋಕ ಕಾಲಪ್ಪ ವಾಲಿಕಾರ, ಮಂಗಲ ಗಂ.<br>ಸೋಮನಾಥ ತಳವಾರ, ಮಂಜುನಾಥ ಕಾಲಪ್ಪ<br>ವಾಲಿಕಾರ, ಪ್ರೀಯಾ ಗಂ.ಸಾಗರ ಸಾಠೆ,<br>ಸೋಮಲಿಂಗ ಧರ್ಮಪ್ಪ ವಾಲಿಕಾರ,<br>ಶಿವಮ್ಮ ಗಂ.ಶಿದ್ದಪ್ಪ ಕೋಲಕಾರ | 102/3 | ಖುಷ್ಕಿ | |
| 8 | ದಸ್ತಗೀರಸಾಬ ತಂ.ಮುರ್ತುಜಸಾಬ ಮುಜಾವರ | 111/1 | ಖುಷ್ಕಿ | 1–35 |
| | ಹಸನಸಾಬ ಉರ್ಫ ಹುಸೇನಬಾಶ್ಯಾ ತಂ.<br>ಮುರ್ತುಜಸಾಬ ಮುಜಾವರ | 111/2 | ಖುಷ್ಕಿ | |
| | ಲಾಲಸಾಹೇಬ ತಂ.ಮುರ್ತುಜಸಾ ಮುಜಾವರ | 111/3 | ಖುಷ್ಕಿ | |
| | ಮೈಬೂಸಾಬ ತಂ.ಮುರ್ತುಜಸಾ ಮುಜಾವರ | 111/4 | ಖುಷ್ಕಿ | |
| | | | ಒಟ್ಟು | 5–23 |
| | **ಲ್ಯಾಟರಲ್–5ರ ಡಿಸ್ಟ್ರೀಬ್ಯೂಟರಿ 8ರಲ್ಲಿ–ಚೈ0.605ಕಿ.ಮೀ. ರಿಂದ ಚೈ –3.010 ಕಿ.ಮೀ.ವರೆಗೆ** | | | |
| 1 | ಸಂಗನಗೌಡ ಗುರುಪಾದಪ್ಪಗೌಡ–ಪಾಟೀಲ | 66/* | ಖುಷ್ಕಿ | 0–06 |
| 2 | ಮಹಾನಿಂಗಪ್ಪಗೌಡ ವೀರಪ್ಪಗೌಡ ಪಾಟೀಲ–ಕುಲಕರ್ಣಿ<br>ಉತ್ತರಕ್ಕೆ | 65/1 | ಖುಷ್ಕಿ | 3–01 |
| | ಸುಪ್ರಿತಾ ಗಂಡ ಸಾಹೇಬಗೌಡ ಪಾಟೀಲ | 65/2 | ಖುಷ್ಕಿ | |
| | ದ್ಯಾಮನಗೌಡ ವೀರಪ್ಪಗೌಡ ಪಾಟೀಲ<br>–ಕುಲಕರ್ಣಿ ದಕ್ಷಿಣಕ್ಕೆ | 65/3 | ಖುಷ್ಕಿ | |
| | ಕಮಲಾಬಾಯಿ ಗಂ.ಬಸನಗೌಡ ಪಾಟೀಲ,<br>ಪ್ರಭುಗೌಡ ತಂ.ಬಸನಗೌಡ ಪಾಟೀಲ,<br>ಗುರುಬಾಯಿ ಗಂ.ರಾಮಗೊಂಡ ಬಿರಾದಾರ,<br>ಮಹಾದೇವಿ ಗಂ.ಭೀಮನಗೌಡ ಬಿರಾದಾರ,<br>ಭಾಗೀರಥಿ ಗಂ.ಯಶವಂತ ಬಾಗಾನವರ | 65/4 | ಖುಷ್ಕಿ | |
| | ರೇಣುಕಾ ಗಂ.ಸಾಹೇಬಗೌಡ ಪಾಟೀಲ | 65/5 | ಖುಷ್ಕಿ | |
| | ಗುರಲಿಂಗಪ್ಪಗೌಡ ತಂ.ಚನ್ನಪ್ಪಗೌಡ ಪಾಟೀಲ | 65/6 | ಖುಷ್ಕಿ | |
| 3 | ಶರಣಬಸಪ್ಪ ತಂ.ಗುರಪ್ಪ ಅಂಗಡಗೇರಿ | 46/1 | ಖುಷ್ಕಿ | 0–34 |
| | ಗುರಪ್ಪ ತಂ.ಚನ್ನಬಸಪ್ಪ ಅಂಗಡಗೇರಿ,<br>ಬಿನ್ ಚನ್ನಬಸಪ್ಪ ಅಂಗಡಗೇರಿ | 46/2 | ಖುಷ್ಕಿ | |
| | ಪಾಟೀಲ ಬಾಪೂಗೌಡ ನಾಗನಗೌಡ | 46/3 | ಖುಷ್ಕಿ | |
| | ಪಾಟೀಲ ಶರಣಗೌಡ ನಾಗನಗೌಡ | 46/4 | ಖುಷ್ಕಿ | |
| | ಸವಿತಾ ಗಂ. ಶಿವಾನಂದ ಅಂಗಡಗೇರಿ | 46/5 | ಖುಷ್ಕಿ | |
| | ಸವಿತಾ ಗಂ. ಶಿವಾನಂದ ಅಂಗಡಗೇರಿ | 46/6 | ಖುಷ್ಕಿ | |
| | ವಿಜಯಲಕ್ಷ್ಮೀ ರಮೇಶ ಅಂಗಡಗೇರಿ | 46/7 | ಖುಷ್ಕಿ | |
| | ಭಾರತಿ ಗಂ.ಈರಣ್ಣ ಅಂಗಡಗೇರಿ | 46/8 | ಖುಷ್ಕಿ | |
| 4 | ಶಫೀಕ್ ತಂದೆ ಬಕ್ಷುಸಾಬ ಹಳಗೇರಿ ಬಿನ್ ಬಕ್ಷುಸಾಬ | 38/1 | ಖುಷ್ಕಿ | 0–32 |
| | ಭಾರತಿ ಗಂ.ಮಲ್ಲನಗೌಡ ಪಾಟೀಲ,<br>ಕೋಂ.ಮಲ್ಲನಗೌಡ ಪಾಟೀಲ | 38/2 | ಖುಷ್ಕಿ | |
| | ಇಸ್ಮಾಯಿಲ್ ಮಮ್ಮಲಿಪ ಛಪ್ಪರಬಂದ | 38/3 | ಖುಷ್ಕಿ | |
| | ರಾಜೇಸಾ ಮಮ್ಮದಲಿಫ ಛಪ್ಪರಬಂದ | 38/4 | ಖುಷ್ಕಿ | |
| | ಮೋಹನಗೌಡ ತಂದೆ ಭೀಮನಗೌಡ ಪಾಟೀಲ<br>ಬಿನ್ ಭೀಮನಗೌಡ ಪಾಟೀಲ | 38/5 | ಖುಷ್ಕಿ | |
| | ರಜಾಕಸಾ ಮಮ್ಮದಲಿಪ ಛಪ್ಪರಬಂದ | 38/6 | ಖುಷ್ಕಿ | |
| | ಹುಸೇನಬಾದಾಶಹಾ ಮಹ್ಮದಸಾಬ, ಹಳಕೇರಿ | 38/7 | ಖುಷ್ಕಿ | |
| | ಮಂಗಳಾ ಗಂ.ಚಂದ್ರಶೇಖರ ಪಾಟೀಲ<br>ಕೋಂ. ಚಂದ್ರಶೇಖರ ಪಾಟೀಲ, | 38/8 | ಖುಷ್ಕಿ | |
| 5 | ಮಲ್ಲಯ್ಯ ಮುದ್ದಯ್ಯ ಹಿರೇಮಠ–<br>ಪುಟ್ಟರಾಜ ಮಲ್ಲಯ್ಯ ಹಿರೇಮಠ | 43/* | ಖುಷ್ಕಿ | 0–20 |
| 6 | ಗುರುಪಾದಯ್ಯ ಬಸಯ್ಯ ಹಿರೇಮಠ | 42/1 | ಖುಷ್ಕಿ | 0–20 |
| | ಸಂಗಯ್ಯ ಪವಾಡಯ್ಯ ಹಿರೇಮಠ, ಶೇಖಯ್ಯ<br>ಪವಾಡಯ್ಯ ಹಿರೇಮಠ, ಈರಯ್ಯ ಪವಾಡಯ್ಯ<br>ಹಿರೇಮಠ, ಸಿದ್ದಲಿಂಗಯ್ಯ ಪವಾಡಯ್ಯ ಹಿರೇಮಠ, | 42/2 | ಖುಷ್ಕಿ | |
| | ಮಾಂತಯ್ಯ ಈರಯ್ಯ ಹಿರೇಮಠ,<br>ಶಾಂತಯ್ಯ ಈರಯ್ಯ ಹಿರೇಮಠ | 42/3 | ಖುಷ್ಕಿ | |
| | ಶಿದ್ರಾಮಯ್ಯ ರೇವಯ್ಯ ಹಿರೇಮಠ | 42/4 | ಖುಷ್ಕಿ | |
| 7 | ರಮೇಶಗೌಡ ಶಂಕರಗೌಡ ಪಾಟೀಲ | 41/1 | ಖುಷ್ಕಿ | 1–11 |
| | ಬಾಪುಗೌಡ ಚನ್ನಪ್ಪಗೌಡ ಪಾಟೀಲ | 41/2 | ಖುಷ್ಕಿ | |
| | ಸೈನಾಜಬಿ ಗಂ.ಹಸನಸಾ ವಾಲೀಕಾರ,<br>ರಿಯಾಜ ತಂ.ಹಸನಸಾ ವಾಲೀಕಾರ, ಅ.ಪಾ.ತಾ.<br>ಸೈನಾಜಬಿ, ಸಿರಾಜ ತಂ.ಹಸನಸಾ ವಾಲೀಕಾರ<br>ಅ ಪಾ ತಾ ಸೈನಾಜಬಿ, ಲಾಲಬಿ ಗಂ.ರಾಜೇಸಾಬ<br>ವಾಲೀಕಾರ | 41/3 | ಖುಷ್ಕಿ | |

(3ನೇ ಪುಟಕ್ಕೆ ಮುಂದುವರೆದಿದೆ......)

| ಅ. ನಂ. | ಖಾತೆದಾರರ ಹೆಸರು /ಅನುಭವದಾರರ ಹೆಸರು | ಸರ್ವೆ ನಂಬರು | ಜಮೀನಿನ ತರಹೆ | ಭೂಸ್ವಾಧೀನ ಕ್ಷೇತ್ರ ಎ–ಗುಂ. |
|---|---|---|---|---|
| 1 | 2 | 3 | 4 | 5 6 |
| | ಅಲ್ಲಾಬಿ ಮೌಲಾಸಾಬ ನದಾಫ | 41/4 | ಖುಷ್ಕಿ | |
| | ಸೈನಾಜಬಿ ಗಂ.ಮೌಲಾಸಾ ವಾಲಿಕಾರ, ರಾಜೇಸಾ ಮೌಲಾಸಾ ವಾಲಿಕಾರ,ಅ ಪಾ ತಾಯಿ ಸೈನಾಜಬಿ, ಮಾಲಾನ ತಂ.ಮೌಲಾಸಾ ವಾಲಿಕಾರ, – ಅ ಪಾ ತಾಯಿ ಸೈನಾಜಬಿ, ಅಲ್ಲಾಬಿ ಗಂ.ಮೌಲಾಸಾ ವಾಲಿಕಾರ, ರಾಜು ತಂ.ಮೌಲಾಸಾ ವಾಲಿಕಾರ, –ಅ ಪಾ ತಾಯಿ ಅಲ್ಲಾಬಿ, ಲಾಲಬಿ ಗಂ.ರಾಜೇಸಾ ವಾಲಿಕಾರ | 41/5 | ಖುಷ್ಕಿ | |
| | ಶಿವನಗೌಡ ಶಂಕರಗೌಡ ಪಾಟೀಲ | 41/6 | ಖುಷ್ಕಿ | |
| 8 | ROAD | ROAD | – | 0–04 |
| 9 | ಶೆಟ್ಟೆಪ್ಪ ತಾ ಗಂಗಪ್ಪ ಹೊಲೇರ–ಉರ್ಫ ಚಲವಾದಿ | 25 | ಖುಷ್ಕಿ | 0–20 |
| 10 | ಹಣಮಪ್ಪ ಚಂದಪ್ಪ ಹೊಲೇರ, ಗಂಗಾಧರ ಶಿವಪ್ಪ ಹೊಲೇರ ವಗೈರೆ | 24 | ಖುಷ್ಕಿ | 0–17 |
| 11 | ಪರಮಪ್ಪ ತಂದೆ ಸಾಯಬಣ್ಣ ಮಳಗಿ ಬಿನ್ ಸಾಯಬಣ್ಣ | 23/1ಅ | ಖುಷ್ಕಿ | 1–03 |
| | 1.ಪೀರಪ್ಪ 2.ಪರಮಪ್ಪ 3.ಅಶೋಕ ತಂ.ಸಾಬಪ್ಪ ಮಳಗಿ | 23/1ಬ | ಖುಷ್ಕಿ | |
| | ಸೋಮರಾಯ ನಾಗಪ್ಪ ಮಳಗಿ ಉರ್ಫ ಹೊಲೇರ, ರೇಣುಕಾ ಯಂಕಪ್ಪ ಚಲವಾದಿ | 23/2ಅ | ಖುಷ್ಕಿ | |
| | ಮಹಾದೇವಪ್ಪ ತಂ.ಹಿರಗಪ್ಪ ಹೊಲೇರ ಉ. ಮಳಗಿ, ಕಾಶೀಬಾಯಿ ಗಂ.ಹಣಮಂತ ಚಲವಾದಿ, ಯಲ್ಲವ್ವ ಗಂ.ಫಕೀರಪ್ಪ ಚಲವಾದಿ, ಮಲ್ಲವ್ವ ಗಂ.ಹಿರಗಪ್ಪ ಹೊಲೇರ ಉ ಮಳಗಿ | 23/2ಬ | ಖುಷ್ಕಿ | |
| | ಯಮನಪ್ಪ ತಂದೆ ರುದ್ರಪ್ಪ ಚಲವಾದಿ ಬಿನ್ ರುದ್ರಪ್ಪ | 23/3ಅ | ಖುಷ್ಕಿ | |
| | ಲಕ್ಷ್ಮೀಬಾಯಿ ರಾಮಪ್ಪ ಮಳಗಿ, ನೀಲವ್ವ ಯಲ್ಲಪ್ಪ ಮೂರಮಾನ, ಶಿವಪ್ಪ ರಾಮಪ್ಪ ಮಳಗಿ, ಸುವರ್ಣಾ ಪರಶುರಾಮ ತಳಕೇರಿ, ಬಸವರಾಜ ರಾಮಪ್ಪ ಮಳಗಿ, ಕಸ್ತೂರಿ ಹುಚ್ಚಪ್ಪ ದೊಡಮನಿ, ರೇಣುಕಾ ಶ್ರೀಕಾಂತ ಚಲವಾದಿ | 23/3ಕ | ಖುಷ್ಕಿ | |
| | ಭೀಮವ್ವ ಗಂ.ಲಕ್ಷ್ಮಣ ಮಳಗಿ, ಬಸವರಾಜ ತಂ.ಲಕ್ಷ್ಮಣ ಮಳಗಿ, ನೀಲಮ್ಮ ಗಂ. ಮಹಾದೇವಪ್ಪ ವಾಲೀಕಾರ, ಮಹಾದೇವಿ ಗಂ.ರಮೇಶ ಕಡಿಮನಿ, ಶಾಂತವ್ವ ಗಂ.ಶಿದ್ಲಿಂಗಪ್ಪ ಶಿಂಗೆ, | 23/3ಬ | ಖುಷ್ಕಿ | |
| 12 | ಮೈಬೂಬಸಾಬ ತಂ.ಹನೀಫಸಾಬ ಉರ್ಫ ಹನೀಮಸಾ ಚಪ್ಪರಬಂದ ಉರ್ಫ ಹಳಕೇರಿ, ಸುಭಾನಬಿ ಗಂ. ಪಕೀರಸಾ ಬಳ್ಳಾರಿ, ಮಹ್ಮದ ತಂ.ಮೌಲಾಸಾಬ ಚಪ್ಪರಬಂದ ಉರ್ಫ ತಳಕೇರಿ, ದಸ್ತಗೀರಸಾಬ ತಂ. ಮೌಲಾಸಾಬ ಚಪ್ಪರಬಂದ ಉರ್ಫ ಹಳಕೇರಿ, ಖಾಜೇಸಾಬ ಮೌಲಾಸಾಬ ಚಪ್ಪರಬಂದ, ಉರ್ಫ ಹಳಕೇರಿ, ಇಬ್ರಾಹಿಮ್ ತಂ.ರಾಜೇಸಾಬ ಚಪ್ಪರಬಂದ ಉರ್ಫ ಹಳಕೇರಿ, ಇಬ್ರಾಹಿಮ್ ತಂ.ರಾಜೇಸಾಬ ಚಪ್ಪರಬಂದ ಉರ್ಫ ಹಳಕೇರಿ, ಬಕ್ಷುಸಾಬ ತಂ. ರಾಜೇಸಾಬ ಚಪ್ಪರಬಂದ ಉರ್ಫ ಹಳಕೇರಿ, ಬಕ್ಷುಸಾಬ ತಂ.ರಾಜೇಸಾಬ ಚಪ್ಪರಬಂದ ಉರ್ಫ ಹಳಕೇರಿ, ಜೈತುನಬಿ ಗಂ.ಕಾಶೀಮಸಾ ಚಪ್ಪರಬಂದ ಉರ್ಫ ಹಳಕೇರಿ, ಸಕೀನಾ ಗಂ.ಮಹ್ಮದ ಚಪ್ಪರಬಂದ, ಖಾತನಬಿ ಗಂ.ಅಲ್ಲಾಭಕ್ಷ ಚಪ್ಪರಬಂದ,ಉರ್ಫ ಹಳಕೇರಿ, ಜುಬೇದಾ ಗಂ.ಅಮಿದ ಶೇಖ, ಬಿಬಿಜಾನ ಗಂ. ಶ್ಯಾಬುದ್ದೀನ ಚಪ್ಪರಬಂದ ಉರ್ಫ ಹಳಕೇರಿ, ಸಕೀನಾ ಗಂ.ಮಹ್ಮದ ಚಪ್ಪರಬಂದ, ಖಾತನಬಿ ಗಂ. ಅಲ್ಲಾಭಕ್ಷ ಚಪ್ಪರಬಂದ, ಮಮತಾಜಬೇಗಂ ಗಂ.ಸಾಹೇಬಲಾಲ ಚಪ್ಪರಬಂದ. | 22/* | ಖುಷ್ಕಿ | 0–20 |
| 13 | ಪಾಟೀಲ ಶ್ರೀಮತಿ ದೊಡ್ಡಪ್ಪಗೌಡ, | 27/* | ಖುಷ್ಕಿ | 0–01 |
| 14 | ಸುಭಾಶಚಂದ್ರ ಸಂಗನಗೌಡ ಪಾಟೀಲ | 28/1 | ಖುಷ್ಕಿ | 1–27 |
| | ಅರುಣಕುಮಾರ ಸುಭಾಸಚಂದ್ರ ಪಾಟೀಲ | 28/2 | ಖುಷ್ಕಿ | |
| | ಬಸವರಾಜ ಸಂಗನಗೌಡ ಪಾಟೀಲ | 28/3 | ಖುಷ್ಕಿ | |
| 15 | ಶರಣಯ್ಯ ಮುದ್ದಯ್ಯ ಹಿರೇಮಠ | 29/1 | ಖುಷ್ಕಿ | 2–15 |
| | ಪೀರಪ್ಪ ಲಕ್ಷ್ಮಣ ಸಣತಂಗಿ | 29/2 | ಖುಷ್ಕಿ | |
| 16 | ಬಾದಶಹಾ ತಂ.ಅಬ್ದುಲಸಾ ಮುಜಾವರ ಇಮಾಮಲಿ ತಂ.ಅಬ್ದುಲಸಾ ಮುಜಾವರ, ಬಾಬು ತಂ.ಮಕ್ಕುಮಪಟೇಲ ಮುಜಾವರ, ಅಬ್ಬಾಸಲಿ ತಂ.ಮಕ್ತುಮಪಟೇಲ ಮುಜಾವರ ಹುಚ್ಚೇಸಾಬ ತಂ.ಮಕ್ತುಮಪಟೇಲ ಮುಜಾವರ ಬಾನುಬಿ ಗಂ.ಮಕ್ತುಮಪಟೇಲ ಮುಜಾವರ ಲಾಲಬಿ ಗಂ.ಆದಮಸಾಬ ಕೋಲ್ಹಾರ, ಯಾಸ್ಮೀನ ಗಂ.ರಜಾಕ ಕುಕರಪೀರ, ಪರವೀನ ತಂ.ಮಕ್ತುಮಪಟೇಲ ಮುಜಾವರ, ಅಮೀನಾ ತಂ.ಮಕ್ತುಮಪಟೇಲ ಮುಜಾವರ ರಾಜೇಸಾ ಮಮ್ಮದಸಾ ಮುಜಾವರ | 17/1 | ಖುಷ್ಕಿ | 0–28 |
| 17 | ರೇಣುಕಾ ಗಂಡ ಸಂಗಣ್ಣ ನಿರವಾನದ ಉರ್ಫ ಕೋರಳ್ಳಿ | 12/1 | ಖುಷ್ಕಿ | 1–29 |
| | ಶಂಕ್ರಮ್ಮ ಗಂಡ ಶಿವಗೊಂಡಪ್ಪ ಗೊಳಸಂಗಿ, ಕೋಂ. ಶಿವಗೊಂಡಪ್ಪ ಗೊಳಸಂಗಿ | 12/2 | ಖುಷ್ಕಿ | |
| | ಚಂದ್ರಶೇಖರ ಹಣಮಂತ್ರಾಯ–ಮನಗೂಳಿ ಫಶ್ಚಿಮಕ್ಕೆ | 12/3 | ಖುಷ್ಕಿ | |
| | ಮಂಜುನಾಥ ತಂದೆ ಸಂಗಣ್ಣ ಲಗಳಿ, ಗುರುರಾಜ ತಂದೆ ಸಂಗಣ್ಣ ಲಗಳಿ, | 12/4 | ಖುಷ್ಕಿ | |
| | ಅಡಿವೆಪ್ಪ ಹಣಮಂತ್ರಾಯ ಮನಗೂಳಿ– ದಕ್ಷಿಣಕ್ಕೆ | 12/5 | ಖುಷ್ಕಿ | |
| | ಲಕ್ಷ್ಮೀಂಬಾಯಿ ತಂ.ಕಲ್ಲಪ್ಪ ಮನಗೂಳಿ– ಬಿನ್ ಕಲ್ಲಪ್ಪ ಮನಗೂಳಿ | 12/6 | ಖುಷ್ಕಿ | |
| | ಕಲ್ಲಪ್ಪ ತಂದೆ ಅಡಿವೆಪ್ಪ ಮನಗೂಳಿ | 12/7 | ಖುಷ್ಕಿ | |
| | ಚಂದ್ರಶೇಖರ ಹಣಮಂತ್ರಾಯ–ಮನಗೂಳಿ ಉತ್ತರಕ್ಕೆ | 12/8 | ಖುಷ್ಕಿ | |
| 18 | ಗುರುಪಾದಪ್ಪ ಕಲ್ಲಪ್ಪ ಮನಗೂಳಿ | 11 | ಖುಷ್ಕಿ | 1–23 |
| | | | **ಒಟ್ಟು** | **17–31** |

| ಅ. ನಂ. | ಖಾತೆದಾರರ ಹೆಸರು /ಅನುಭವದಾರರ ಹೆಸರು | ಸರ್ವೆ ನಂಬರು | ಜಮೀನಿನ ತರಹೆ | ಭೂಸ್ವಾಧೀನ ಕ್ಷೇತ್ರ ಎ–ಗುಂ. |
|---|---|---|---|---|
| 1 | 2 | 3 | 4 | 5 6 |
| **ಸಬ್ ಲ್ಯಾಟರಲ್–1ರ ಲ್ಯಾಟರಲ್–5ರ ಡಿಸ್ಟ್ರೀಬ್ಯೂಟರಿ 8ರಲ್ಲಿ – ಚೈ 0.275 ಕಿ.ಮೀ. ರಿಂದ ಚೈ–2.182 ಕಿ.ಮೀ.ವರೆಗೆ** | | | | |
| 1 | ಸಂಗನಬಸಮ್ಮ ಗಂ.ನಾನಾಗೌಡ ಪಾಟೀಲ | 70/* | ಖುಷ್ಕಿ | 1–20 |
| | ಬಸವನಗೌಡ ತಂ.ನಾನಾಗೌಡ ಪಾಟೀಲ | | | |
| | ಸವಿತಾ ತಂ.ನಾನಾಗೌಡ ಪಾಟೀಲ | | | |
| | ಶೋಭಾ ತಂ.ನಾನಾಗೌಡ ಪಾಟೀಲ | | | |
| | ವಿರೇಶ ತಂ.ನಾನಾಗೌಡ ಪಾಟೀಲ | | | |
| | ಶಾಂತಮ್ಮ ಗಂ.ಮಡಿವಾಳಪ್ಪ ಪಾಟೀಲ | | | |
| 2 | ಬಸನಗೌಡ ತಂ.ನಾನಾಗೌಡ ಪಾಟೀಲ | 69/* | ಖುಷ್ಕಿ | 1–21 |
| 3 | ಅಂಬವ್ವ ಗಂ.ಶಂಕ್ರೆಪ್ಪ ಕಂಟೆಪ್ಪಗೋಳ | 63/1 | ಖುಷ್ಕಿ | 1–34 |
| | ಶಂಕ್ರಮ್ಮ ಗಂ.ಶರಣಪ್ಪ ಅಂಬಿಗೇರ, ದೇವಮ್ಮ ಗಂ.ಶೇಖಪ್ಪ ನೆಲ್ಲಗಿ, ಸುವರ್ಣಾ ಗಂ. ಮಡಿವಾಳಪ್ಪ ಯಾಳವಾರ, ಶರಣಪ್ಪ ತಂ.ಆನಂದಪ್ಪ ಕಂದಗಲ್ | 63/2 | ಖುಷ್ಕಿ | |
| | ಸರಸ್ವತಿ ಗಂ.ಸೋಮನಗೌಡ ಪಾಟೀಲ | 63/3 | ಖುಷ್ಕಿ | |
| | ಶಿವಯ್ಯ ತಂ.ಮಲ್ಲಯ್ಯ ಮಠ, ಬಿನ್ ಮಲ್ಲಯ್ಯ ಮಠ, | 63/4 | ಖುಷ್ಕಿ | |
| 4 | ಮನ್ಸೂರಸಾಬ ಪೀರಸಾಬ ಅಗಸರ ಬಿನ್ ಪೀರಸಾಬ ಅಗಸರ, | 62/1 | ಖುಷ್ಕಿ | 1–21 |
| | ಹುಸೇನಸಾಬ ಪೀರಸಾಬ ಅಗಸರ ಬಿನ್ ಪೀರಸಾಬ ಅಗಸರ | 62/2 | ಖುಷ್ಕಿ | |
| 5 | ರಾಜೇಸಾ ಫಕೀರಸಾ ಅಗಸರ | 58/1 | ಖುಷ್ಕಿ | 0–11 |
| | ಫಕೀರಸಾಬ ಸಾಹೇಬಲಾಲ ಅಗಸರ ಬಿನ್ ಸಾಹೇಬಲಾಲ ಅಗಸರ | 58/2 | ಖುಷ್ಕಿ | |
| | ಕಮಲಸಾಬ ಸಾಹೇಬಲಾಲ ಅಗಸರ ಬಿನ್ ಸಾಹೇಬಲಾಲ ಅಗಸರ | 58/3 | ಖುಷ್ಕಿ | |
| 6 | ಮಹ್ಮದಲಿ ತಂ. ರಾಜೇಸಾಬ ಅಗಸರ | 59/1 | ಖುಷ್ಕಿ | 2–04 |
| | ಯಮನೂರಸಾ ರಾಜೇಸಾ ಅಗಸರ | 59/2 | ಖುಷ್ಕಿ | |
| | ಟೀಪುಸುಲ್ತಾನ ರಾಜೇಸಾ ಅಗಸರ | 59/3 | ಖುಷ್ಕಿ | |
| 7 | ಮಾದೇವಪ್ಪ. ದ್ಯಾಮಪ್ಪ ತಂ.ಭೀಮಪ್ಪ ಮಾದರ | 60/* | ಖುಷ್ಕಿ | 3–11 |
| | ಮಲ್ಲಪ್ಪ ಯಮನಪ್ಪ ಸಣತಂಗಿ | 60/1 | ಖುಷ್ಕಿ | |
| | ಪರಮಾನಂದ ಸಂಗಪ್ಪ ಸಣತಂಗಿ | 60/2 | ಖುಷ್ಕಿ | |
| | ಶೇಖಪ್ಪ ಹಣಮಂತ ಸಣತಂಗಿ | 60/3 | ಖುಷ್ಕಿ | |
| | ರೇಣುಕಾ ಗಂ.ಶರಣಪ್ಪ ಸಣತಂಗಿ, ಬಸಮ್ಮ ತಂ.ಶರಣಪ್ಪ ಸಣತಂಗಿ–ಅ ಪಾ ತಾ ರೇಣುಕಾ, ಮನೋಜ ತಂ.ಶರಣಪ್ಪ ಸಣತಂಗಿ– ಅಪಾತಾ ರೇಣುಕಾ ರಚಿತಾ ತಂ. ಶರಣಪ್ಪ ಸಣತಂಗಿ,ಅಪಾತಾ ರೇಣುಕಾ | 60/4 | ಖುಷ್ಕಿ | |
| 8 | ಯಲ್ಲವ್ವ ಗಂ.ಮಹಾದೇವಪ್ಪ ಮಾದರ, ದ್ಯಾಮವ್ವ ಗಂ.ಶಾಂತಪ್ಪ ಮಾದರ, 3. ಶಿವಮ್ಮ ಗಂ.ಹಣಮಂತ ಮಾದರ, 4. ಭೀಮಪ್ಪ 5.ಅಶೋಕ 6.ಶಾಂತವ್ವ ತಂ.ಮಹಾದೇವಪ್ಪ ಮಾದರ, ಲಕ್ಷ್ಮೀಬಾಯಿ ಗಂ.ದ್ಯಾವಪ್ಪ ಮಾದರ, ಮಲ್ಲಿಕಾರ್ಜುನ ತಂ.ದ್ಯಾವಪ್ಪ ಮಾದರ, ಪರಸಪ್ಪ ತಂ.ದ್ಯಾವಪ್ಪ ಮಾದರ, ಅರ್ಜುನ ತಂ.ದ್ಯಾವಪ್ಪ ಮಾದರ, ಭೀಮಬಾಯಿ ಗಂ.ಮಹಾಂತಪ್ಪ ಮಾದರ, ಸೋಮವ್ವ ಗಂ.ಬಸವರಾಜ ಮಾದರ. | 50/* | ಖುಷ್ಕಿ | 0–38 |
| 9 | ಬಾಪುಗೌಡ ಚನ್ನಪ್ಪಗೌಡ ಪಾಟೀಲ–ಉತ್ತರಕ್ಕೆ 0.08 | 52/1 | ಖುಷ್ಕಿ | 0–30 |
| | ಗುರಲಿಂಗಪ್ಪಗೌಡ ಚನ್ನಪ್ಪಗೌಡ–ಪಾಟೀಲ ನಡುವೆ, | 52/2 | ಖುಷ್ಕಿ | |
| | ಸಾಹೇಬಗೌಡ ಚನ್ನಪ್ಪಗೌಡ ಪಾಟೀಲ– ದಕ್ಷಿಣಕ್ಕೆ | 52/3 | ಖುಷ್ಕಿ | |
| 10 | ಬಸವರಾಜ ಸಂಗನಗೌಡ ಪಾಟೀಲ | 51/1 | ಖುಷ್ಕಿ | 1–35 |
| | ಪ್ರಭುಗೌಡ ನಾಗನಗೌಡ ಪಾಟೀಲ ಬಿನ್ ನಾಗನಗೌಡ | 51/2 | ಖುಷ್ಕಿ | |
| | ಪಾಟೀಲ ಶ್ರೀಮತಿ ದೊಡ್ಡಪ್ಪಗೌಡ | 51/3 | ಖುಷ್ಕಿ | |
| | | | **ಒಟ್ಟು** | **15–25** |
| | | **ನಿವ್ವಳ ಒಟ್ಟು** | | **38–39** |

**ಸಹಿ/–**

**ಪ್ರಕಾಶ ಜ.ರಜಪೂತ**

**ವಿಶೇಷ ಜಿಲ್ಲಾಧಿಕಾರಿ,**

**ಹಾಗೂ ಸಮೂಹ ವ್ಯವಸ್ಥಾಪಕರು,**

**ಭೂಸ್ವಾಧೀನ ಪುನರ್ ನಿರ್ಮಾಣ ಮತ್ತು ಪುನರ್ ವಸತಿ**

**ಕೃಷ್ಣಾ ಮೇಲ್ದಂಡೆ ಯೋಜನೆ ಬಾಗಲಕೋಟೆ.**

# ಮನೆಗಳ್ಳನ ಬಂಧನ: 13.40 ಲಕ್ಷ ರೂ.ಮೌಲ್ಯದ ಚಿನ್ನ, ಬೆಳ್ಳಿ ಆಭರಣ ಜಪ್ತಿ

ಕಲಬುರಗಿ: ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 4 ಮನೆಗಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕುಖ್ಯಾತ ಕಳ್ಳನೊಬ್ಬನನ್ನು ಬಂಧಿಸಿ 13.40 ಲಕ್ಷ ರೂ.ಮೊತ್ತದ ಚಿನ್ನ ಮತ್ತು ಬೆಳ್ಳಿ ಆಭರಣ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ನಗರ ಪೊಲೀಸ್ ಆಯುಕ್ತರ ಕಚೇ–ರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 4 ಮನೆಗಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ತೆಲಂಗಾಣ ರಾಜ್ಯದ ಹೈದ್ರಾಬಾದನ ಮಹ್ಮದ್ ಮುಜಾಹಿದ್ ಅಲಿಯಾಸ್ ಜಾವೀದ್ ತಂದೆ ಮಹ್ಮದ್ ಜಾಫರ್ (32) ಎಂಬಾತನನ್ನು ಬಂಧಿಸಿ 13.40 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ತಮ್ಮ ಮನೆ ಬೀಗ ಮುರಿದು ಕಳ್ಳರು ಚಿನ್ನಾಭರಣ, 16 ಸಾವಿರ ರೂ.ನಗದು ಸೇರಿ 66 ಸಾವಿರ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ ಎಂದು ನಗರದ ಹಳೇ ಜೇವರ್ಗಿ ರಸ್ತೆಯ ಜೀವನ ಪ್ರಕಾಶ ಶಾಲೆ ಹಿಂದುಗಡೆ ಇರುವ ಏರಿಯಾ ನಿವಾಸಿ ಶಿವರಾಜ ಅವಂಟಿ ಎಂಬುವವರು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಪ್ರಕರಣದ ಆರೋಪಿಗಳ ಪತ್ತೆಗೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಅವರ ಮಾರ್ಗದರ್ಶನದಲ್ಲಿ ಡಿಸಿಪಿಗಳಾದ ಶಾಲೂ, ಪ್ರವೀಣ್ ಹೆಚ್.ನಾಯಕ್, ಕಲಬುರಗಿ ದಕ್ಷಿಣ ಉಪ ವಿಭಾಗದ ಸಹಾಯಕ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಪಿಐ ಜಿ.ಎಂ.ಪಾಟೀಲ ಅವರ ನೇತೃತ್ವದಲ್ಲಿ ಎಎಸ್ಐ ಶಿವಶರಣಪ್ಪ, ಸಿಬ್ಬಂದಿಗಳಾದ ಸಿರಾಜ ಪಟೇಲ್, ಪ್ರಭಾಕರ, ಮೋಸಿನ್, ಯಲ್ಲಪ್ಪ, ಶಿವಲಿಂಗ, ಮಲ್ಲಣ್ಣ, ಸಂಗಣ್ಣ, ಅನೀಲಕುಮಾರ, ಚನ್ನವಿರೇಶ ಅವರನ್ನು ಒಳಗೊಂಡ ತಂಡ ರಚಿಸಲಾಗಿ–ತ್ತು. ಈ ತಂಡ ತನಿಖೆ ನಡೆಸಿ ಆರೋಪಿ ಮಹ್ಮದ್ ಮುಜಾಹಿದ್ ಅಲಿಯಾಸ್ ಜಾವೀನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 4 ಮನೆ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಆರೋಪಿ ಕಳ್ಳತನ ಮಾಡಿದ್ದ 12.75 ಲಕ್ಷ ರೂ.ಮೊತ್ತದ 85 ಗ್ರಾಂ.ಬಂಗಾರದ ಆಭರಣ, 65 ಸಾವಿರ ರೂ.ಮೌಲ್ಯದ 260 ಗ್ರಾಂ.ಬೆಳ್ಳಿ ಆಭರಣ ಸೇರಿ 13.40 ಲಕ್ಷ ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.


ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 4 ಮನೆ ಕಳ್ಳತನ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿ–ಸಿದರು.

ಡಿಸಿಪಿಗಳಾದ ಶಾಲೂ, ಪ್ರವೀಣ್ ಹೆಚ್.ನಾಯಕ್, ಕಲಬುರಗಿ ದಕ್ಷಿಣ ಉಪ ವಿಭಾಗದ ಸಹಾಯಕ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಪಿಐ ಜಿ.ಎಂ.ಪಾಟೀಲ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಯಶಸ್ಸಿನ ಕಹಿ ರಹಸ್ಯ!

## ಜಯ್ ನುಡಿ

### (ವ್ಯಕ್ತಿತ್ವ ವಿಕಸನ ಕುರಿತು ಲೇಖನ ಮಾಲಿಕೆ)




■ ಉದಯರಶ್ಮಿ ದಿನಪತ್ರಿಕೆ

ದಿನಾಲೂ ರಾತ್ರಿ ಮುಂಜಾನೆ 5 ಗಂಟೆಗೆ ಏಳಬೇಕೆಂದು ಅಲಾರಾಂ ಇಡುತ್ತೇವೆ. ಅಲಾರಾಂ ಹೊಡೆದಾಗ, ಅದನ್ನು 'ಸ್ನೂಜ್' ಮಾಡಿ ಮತ್ತೊಂದು ಮುಸುಕು ಹೊದ್ದು ಮಲಗುವುದು ನಮ್ಮ ಮನಸ್ಸಿಗೆ ತುಂಬಾ ಇಷ್ಟ. ಆದರೆ, ಅ ಆಲಸ್ಯವನ್ನು ಬದಿಗಿಟ್ಟು ಎದ್ದು ಓದುವುದು ಯಶಸ್ಸಿಗೆ ಇಷ್ಟ. ನಾಲಿಗೆಗೆ ರುಚಿ ಕೊಡುವ ಜಂಕ್ ಫುಡ್ ತಿನ್ನುವುದು ನಮಗೆ ಇಷ್ಟ, ಆದರೆ ಆರೋಗ್ಯ ಮತ್ತು ಫಿಟ್‌ನೆಸ್ ಎಂಬ ಯಶಸ್ಸಿಗೆ ಪ್ರತಿದಿನ ಕಹಿ ಕಷಾಯ ಕುಡಿಯುವುದು ಮತ್ತು ಹಸಿರು ತರಕಾರಿ ತಿನ್ನುವುದು ಇಷ್ಟ. ಪರೀಕ್ಷೆಯ ಸಮಯದಲ್ಲಿ ಕೈಯಲ್ಲಿರುವ ಮೊಬೈಲ್‌ನಲ್ಲಿ ಇನ್‌ಸ್ಟಾಗ್ರಾಮ್ ರೀಲ್ಸ್ ನೋಡುತ್ತಾ ಕೂರುವುದು ನಮಗೆ ಇಷ್ಟ, ಆದರೆ ಆ ಮೊಬೈಲ್ ಪಕ್ಕಕ್ಕಿಟ್ಟು ಕಣ್ಣು ಕೆಂಪಾಗುವಂತೆ ಕಠಿಣ ವಿಷಯಗಳನ್ನು ಓದುವುದು ಯಶಸ್ಸಿಗೆ ಇಷ್ಟ.

**ಇಷ್ಟವಿಲ್ಲದ್ದು**

ನಮಗೆ ಇಷ್ಟವಿಲ್ಲದ್ದು ಯಶಸ್ಸಿಗೆ ಇಷ್ಟ: "ಯಶಸ್ಸಿನ ರಹಸ್ಯವು ನೀವು ಇಷ್ಟಪಡದ ಕೆಲಸಗಳನ್ನು ಮಾಡುವ ಅಭ್ಯಾಸವನ್ನು ರೂಢಿಸಿಕೊಳ್ಳುವುದರಲ್ಲಿದೆ." ಈ ಮಾತು ಕೇವಲ ಒಂದು ವಾಕ್ಯವಲ್ಲ; ಇದು ಜಗತ್ತಿನ ಪ್ರತಿಯೊಬ್ಬ ಮಹಾನ್ ಸಾಧಕನ ಜೀವನದ ತಿರುಳು. ನಮ್ಮ ಮನಸ್ಸು ಯಾವಾಗಲೂ ಸುಲಭವಾದ, ಆರಾಮದಾಯಕವಾದ ಮತ್ತು ತಕ್ಷಣದ ಸಂತೋಷ ಕೊಡುವ ಕೆಲಸಗಳತ್ತ ಆಕರ್ಷಿತವಾಗುತ್ತದೆ. ಹೀಗಾಗಿ ನಾವು ತಕ್ಷಣದ ಸಂತೋಷಕ್ಕೆ ಜೋತು ಬೀಳುತ್ತೇವೆ. ಸಮಯ ವ್ಯರ್ಥಗೊಳಿಸುತ್ತೇವೆ. ಆದರೆ, ನೈಜ ಯಶಸ್ಸು ಸದಾ ಕಠಿಣ ಪರಿಶ್ರಮ, ಶಿಸ್ತು ಮತ್ತು ತ್ಯಾಗವನ್ನು ಬೇಡುತ್ತದೆ. ನಮಗೆ ಯಾವುದು ಕಷ್ಟ ಅನಿಸುತ್ತದೆಯೋ, ಯಾವುದು ನಮಗೆ ಇಷ್ಟವಿರುವುದಿಲ್ಲವೋ, ಅದೇ ಯಶಸ್ಸಿನ ಹೆಬ್ಬಾಗಿಲನ್ನು ತೆರೆಯುವ ಕೀಲಿ ಕೈ ಆಗಿರುತ್ತದೆ. ಬಾಕ್ಸಿಂಗ್ ದಂತಕಥೆಯ ಮಹಮ್ಮದ್ ಅಲಿ ಅವರು ಒಮ್ಮೆ ಹೇಳಿದ್ದರು: "ನಾನು ತರಬೇತಿಯ ಪ್ರತಿಯೊಂದು ನಿಮಿಷವನ್ನೂ ದ್ವೇಷಿಸುತ್ತಿದ್ದೆ (ಇಷ್ಟಪಡುತ್ತಿರಲಿಲ್ಲ). ಆದರೆ ನಾನು ನನಗೆ ನಾನೇ ಹೇಳಿಕೊಂಡೆ 'ಈಗ ಕಷ್ಟಪಡು, ಇಡೀ ಜೀವನ ಚಾಂಪಿಯನ್ ಆಗಿ ಬದುಕು.' ತರಬೇತಿಯ ನೋವನ್ನು ಸಹಿಸಿಕೊಂಡಿದ್ದರಿಂದಲೇ ಅವರು ಜಗತ್ತಿನ ಶ್ರೇಷ್ಠ ಬಾಕ್ಸರ್ ಆದರು.


**ಅಭ್ಯಾಸ**

ನಮಗೆ ಯಾವುದು ತಕ್ಷಣದ ಸುಖ ನೀಡುತ್ತದೆಯೋ, ಅದು ನಮ್ಮನ್ನು ಸೋಲಿನತ್ತ ಕೊಂಡೊಯ್ಯುತ್ತದೆ. ಆದರೆ ನಮಗೆ ಯಾವುದು ಕಷ್ಟ, ಬೇಸರ ಮತ್ತು ಇಷ್ಟವಿಲ್ಲದ ಕೆಲಸ ಅನಿಸುತ್ತದೆಯೋ, ಅದೇ ನಮ್ಮನ್ನು ಯಶಸ್ಸಿನ ಶಿಖರಕ್ಕೆ ತಲುಪಿಸುತ್ತದೆ. ಅಮೆರಿಕಾದ ಪ್ರಸಿದ್ಧ ಲೇಖಕ ಆಲ್ಬರ್ಟ್ ಇ.ಎನ್.ಗ್ರೇ ಅವರ ಪ್ರಕಾರ, "ಯಶಸ್ವಿ ವ್ಯಕ್ತಿಗಳು ತಾವು ಇಷ್ಟಪಡದ ಕೆಲಸಗಳನ್ನೇ ಮಾಡುವ ಅಭ್ಯಾಸವನ್ನು ಮಾಡಿಕೊಂಡಿರುತ್ತಾರೆ. ಅವರು ಆ ಕೆಲಸಗಳನ್ನು ಪ್ರೀತಿಸುತ್ತಾರೆ ಎಂದಲ್ಲ, ಆದರೆ ತಮ್ಮ ಗುರಿಯ ಮೇಲಿರುವ ಪ್ರೀತಿ ಅವರಿಂದ ಆ ಕೆಲಸವನ್ನು ಮಾಡಿಸುತ್ತದೆ." ಅಂದರೆ, ಯಶಸ್ಸಿಗೆ ತಲುಪಲು ನಾವು ನಮ್ಮ ಇಂದಿನ ಸಣ್ಣಪುಟ್ಟ ಇಷ್ಟಗಳನ್ನು ತ್ಯಾಗ ಮಾಡಲೇಬೇಕಾಗುತ್ತದೆ



**ಕಠಿಣ ನಿಯಮ**

ಯಶಸ್ಸಿಗೆ ತಲುಪಲು ನಾವು ತತ್ಕಾಲದ ಇಷ್ಟ-ಕಷ್ಟಗಳನ್ನು ಬದಿಗಿಡಬೇಕಾಗುತ್ತದೆ .ಆರಾಮ ವಲಯದ ಆಚೆಗಿನ ಪ್ರಪಂಚ




ನಮಗೆ ಇಷ್ಟವಾದ ಕೆಲಸಗಳು ನಮ್ಮನ್ನು 'ಆರಾಮ ವಲಯ'ದಲ್ಲಿ ಇಡುತ್ತವೆ. ಬೆಳಿಗ್ಗೆ ಬೇಗ ಏಳುವುದು, ಗಂಟೆಗಟ್ಟಲೆ ಓದುವುದು, ಶಿಸ್ತಿನಿಂದ ಆಹಾರ ಪದ್ಧತಿ ಪಾಲಿಸುವುದು, ಪ್ರತಿದಿನ ಬೆವರು ಹರಿಸುವುದು ಯಾರಿಗೂ ಸುಲಭವಾಗಿ ಇಷ್ಟವಾಗುವುದಿಲ್ಲ. ಆದರೆ, ಈ 'ಇಷ್ಟವಿಲ್ಲದ' ಪ್ರಕ್ರಿಯೆಗಳೇ ಯಶಸ್ಸಿಗೆ ಅತ್ಯಂತ ಪ್ರಿಯವಾದವುಗಳು. ಸೋಮಾರಿ ಮನಸ್ಸು ವಿಶ್ರಾಂತಿಯನ್ನು ಬಯಸಿದರೆ, ಯಶಸ್ಸು ಜಾಗರೂಕತೆಯನ್ನು ಬಯಸುತ್ತದೆ. ನಮಗೆ ಇಷ್ಟವಿಲ್ಲದ ಕಹಿ ಕಷಾಯವೇ ಹೇಗೆ ಆರೋಗ್ಯಕ್ಕೆ ಒಳ್ಳೆಯದೋ, ಹಾಗೆಯೇ ನಮಗೆ ಇಷ್ಟವಿಲ್ಲದ ಕಠಿಣ ನಿಯಮಗಳು ನಮ್ಮ ಯಶಸ್ಸಿಗೆ ಶ್ರೀರಕ್ಷೆ.

**ನಿರಂತರ ಪ್ರಯತ್ನ**

ಪರಿಶ್ರಮ ಯಶಸ್ಸಿನ ಮೂಲಾಧಾರ. ಕೇವಲ ಅದೃಷ್ಟ ಅಥವಾ ಪ್ರತಿಭೆಯಿಂದ ಸಾಧನೆ ಅಸಾಧ್ಯ. ನಿರಂತರ ಪ್ರಯತ್ನ ಬೇಕು. ಎಷ್ಟೇ ಅಡೆತಡೆಗಳು ಬಂದರೂ ಎದೆಗಾರಿಕೆಯಿಂದ ಎದುರಿಸುವ ಛಾತಿ ಬೆಳೆಸಿಕೊಳ್ಳಬೇಕು. ಶ್ರಮಪಡದ ಹೊರತು ಏನನ್ನೂ ಪಡೆಯಲು ಸಾಧ್ಯವಿಲ್ಲ. ಈ ಸಿದ್ಧಾಂತಕ್ಕೆ ಜಗತ್ತಿನ ಶ್ರೇಷ್ಠ ಸಾಧಕರಾದ ಡಾ. ಬಿ. ಆರ್. ಅಂಬೇಡ್ಕರ್‌ಗಿಂತ ದೊಡ್ಡ ಉದಾಹರಣೆ ಬೇರೊಂದಿಲ್ಲ: ಬಾಲ್ಯದಲ್ಲಿ ತೀವ್ರ ಸಾಮಾಜಿಕ ತಾರತಮ್ಯ ಮತ್ತು ಬಡತನದ ನಡುವೆ, ಹಸಿವು ಮತ್ತು ನಿದ್ದೆಯನ್ನು ಮರೆತು ದಿನಕ್ಕೆ 18 ರಿಂದ 20 ಗಂಟೆಗಳ ಕಾಲ ಓದುತ್ತಿದ್ದರು. ಕತ್ತಲ ಕೋಣೆಯಲ್ಲಿ ದೀಪದ ಬೆಳಕಿನಲ್ಲಿ ಕಷ್ಟಪಟ್ಟು ಓದುವುದು ದೈಹಿಕವಾಗಿ ಇಷ್ಟವಾಗುವ ಕೆಲಸವಾಗಿರಲಿಲ್ಲ. ಆದ-



'ರೆ ಆ ಜ್ಞಾನಾರ್ಜನೆಯ ತಪಸ್ಸೇ ಅವರನ್ನು ಭಾರತದ ಸಂವಿಧಾನ ಶಿಲ್ಪಿಯನ್ನಾಗಿ ಮಾಡಿತು.

**ತ್ಯಾಗ**

ಗೆಲುವಿಗೆ ನೀಡಬೇಕಾದ ಅತಿ ದೊಡ್ಡ ಕಾಣಿಕೆ ಎಂದರೆ ತ್ಯಾಗ. ಇಂದು ಖುಷಿ ನೀಡುವ ಸಣ್ಣಪುಟ್ಟ ಮೋಜು-ಮಸ್ತಿಗಳನ್ನು ತ್ಯಜಿಸಲೇಬೇಕು. ಯಶಸ್ವಿ ವ್ಯಕ್ತಿಗಳು ಗುರಿ ಸಾಧನೆಗಾಗಿ ನಿದ್ದೆ, ವಿಶ್ರಾಂತಿ ಮತ್ತು ವೈಯಕ್ತಿಕ ಇಷ್ಟಗಳನ್ನು ತ್ಯಾಗ ಮಾಡುತ್ತಾರೆ. ಎ.ಪಿ.ಜೆ. ಅಬ್ದುಲ್ ಕಲಾಂ ರಾಮೇಶ್ವರಂನ ಬೀದಿಗಳಲ್ಲಿ ಮುಂಜಾನೆ ಚಳಿ ಗಾಳಿ ಇರುತ್ತಿದ್ದರೂ, ಇಷ್ಟವಿಲ್ಲದಿದ್ದರೂ ನಿದ್ದೆ ಗೆದ್ದು ಪತ್ರಿಕೆಗಳನ್ನು ಹಂಚುತ್ತಿದ್ದರು. ನಂತರ ಗಣಿತ ಮತ್ತು ವಿಜ್ಞಾನದ ಕಠಿಣ ಸಮೀಕರಣಗಳೊಂದಿಗೆ ರಾತ್ರಿಗಳನ್ನೆಲ್ಲ ಕಳೆದರು. ಸುಖದ ನಿದ್ದೆಯನ್ನು ತ್ಯಾಗ ಮಾಡಿದ್ದರಿಂದಲೇ ಅವರು 'ಮಿಸೈಲ್ ಮ್ಯಾನ್' ಆಗಲು ಸಾಧ್ಯವಾಯಿತು.

**ದಿನಚರಿ**

ಕಠಿಣ ಪರಿಶ್ರಮ ಮತ್ತು ಮತ್ತು ತ್ಯಾಗಗಳು ನಿರಂತರವಾಗಿ ನಡೆಯಬೇಕೆಂದರೆ ದಿನಚರಿ ಅತಿ ಮುಖ್ಯ. ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರು ಹೇಳಿದಂತೆ 'ನಿಮ್ಮ ಭವಿಷ್ಯವನ್ನು ನೀವು ಬದಲಾಯಿಸಲು ಸಾಧ್ಯವಿಲ್ಲ, ಆದರೆ ನಿಮ್ಮ ಅಭ್ಯಾಸಗಳನ್ನು ನೀವು ಬದಲಾಯಿಸಬಹುದು. ಆ ಅಭ್ಯಾಸಗಳು ಖಂಡಿತವಾಗಿಯೂ ನಿಮ್ಮ ಭವಿಷ್ಯವನ್ನು ಬದಲಾಯಿಸುತ್ತವೆ. ಸಚಿನ್ ತೆಂಡೂಲ್ಕರ್: ಮುಂಜಾನೆ 4 ಗಂಟೆಗೆ ಎದ್ದು, ಭಾರವಾದ ಕಿಟ್ ಬ್ಯಾಗ್ ಹೊತ್ತು ಶಿವಾಜಿ ಪಾರ್ಕ್‌ಗೆ ತಾಲೀಮಿಗೆ ಹೋಗುವುದು ಹದಿಹರೆಯದ ಹುಡುಗನಿಗೆ ಯಾವಾಗಲೂ ಇಷ್ಟವಿರುತ್ತಿರಲಿಲ್ಲ. ತರಬೇತುದಾರರಾದ ರಮಾಕಾಂತ್ ಅಂಬೇಡ್ಕರ್ ಅವರ ಕಠಿಣ ಶಿಕ್ಷೆಗಳು ಬೇಸರ ತರಿಸುತ್ತಿದ್ದವು. ಆದರೆ, ಆ ಇಷ್ಟವಿಲ್ಲದ ಕಠಿಣ ದಿನಚರಿಯೇ ಅವರನ್ನು 'ಕ್ರಿಕೆಟ್ ದೇವರು' ಸ್ಥಾನಕ್ಕೆ ಏರಿಸಿತು.

**ಕಠಿಣ ಶಿಸ್ತು**

ಯಶಸ್ಸು ಎನ್ನುವುದು ಸುಲಭವಾಗಿ ಸಿಗುವ ಸಿದ್ಧಾನ್ನವಲ್ಲ. ಅದಕ್ಕೆ ನಿರಂತರ ಪ್ರಯತ್ನದ ಬೆವರು ಬೇಕು. ನಮಗೆ ಓದಲು ಇಷ್ಟವಿಲ್ಲದಾಗ ಪುಸ್ತಕ ಹಿಡಿಯುವುದು, ಸೋಲು ಒಪ್ಪಿಕೊಳ್ಳಲು ಮನಸ್ಸಾದಾಗ ಮತ್ತೊಮ್ಮೆ ಪ್ರಯತ್ನಿಸುವುದು-ಇವೇ ಯಶಸ್ಸಿನ ನಿಯಮಗಳು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುವಂತೆ:" ಯಾವ ಕೆಲಸವು ಆರಂಭದಲ್ಲಿ ವಿಷದಂತೆ ಕಹಿಯಾಗಿರುತ್ತದೆಯೋ, ಅದು ಕೊನೆಯಲ್ಲಿ ಅಮೃತದಂತೆ ಮಧುರವಾದ ಫಲವನ್ನು ನೀಡುತ್ತದೆ. ನಮ್ಮ ಮನಸ್ಸಿನ 'ಇಷ್ಟ'ಗಳನ್ನು ನಿಯಂತ್ರಿಸಿ, ಯಶಸ್ಸಿಗೆ 'ಇಷ್ಟ'ವಾದ ಶಿಸ್ತು, ಕಠಿಣ ಪರಿಶ್ರಮ, ಮತ್ತು ಸಮಯ ಪ್ರಜ್ಞೆಯನ್ನು ನಮ್ಮದಾಗಿಸಿಕೊಳ್ಳಬೇಕು. ಇಂದಿನ ತಾತ್ಕಾಲಿಕ ಕಷ್ಟವೇ ನಾಳಿನ ಶಾಶ್ವತ ಯಶಸ್ಸಿನ ಮುನ್ನುಡಿ.

**ಕೊನೆ ಹನಿ**

ಕೊನೆಯದಾಗಿ ಹೇಳಬೇಕೆಂದರೆ, ಯಶಸ್ಸು ಯಾವುದೇ ಉಚಿತ ಕೊಡುಗೆಯಲ್ಲ. ಅದು ನಾವು ಕೊಡುವ ತ್ಯಾಗಕ್ಕೆ ಸಿಗುವ ಪ್ರತಿಫಲ. ನಿಮ್ಮ ಮನಸ್ಸಿಗೆ ಇಷ್ಟವಿಲ್ಲದಿದ್ದರೂ, ನಿಮ್ಮ ಗುರಿಗೆ ಯಾವುದು ಅಗತ್ಯವೋ ಅದನ್ನು ಮಾಡಲು ಕಲಿಯಿರಿ. ಯಾವಾಗ ನೀವು ನಿಮ್ಮ ಆಲಸ್ಯದ 'ಇಷ್ಟ'ಗಳನ್ನು ಮೀರಿ, ಯಶಸ್ಸಿಗೆ 'ಇಷ್ಟ'ವಾದ ಹಾದಿಯಲ್ಲಿ ನಡೆಯುತ್ತೀರೋ, ಆಗ ಯಶಸ್ಸು ನಿಮ್ಮ ಪಾದದಡಿಗೆ ಬರುತ್ತದೆ. ನಿಮ್ಮ ಮನಸ್ಸಿನ ಇಷ್ಟಗಳನ್ನು ಗೆದ್ದು, ಯಶಸ್ಸಿನ ಇಷ್ಟಕ್ಕೆ ಶರಣಾದರೆ, ಜಗತ್ತು ಮೆಚ್ಚುವ ಸಾಧಕರಾಗಿ ಮುನ್ನಡೆಯಬಹುದು.


ಲೇಖನ
■ ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142




## ಆ.27ರಂದು ಅಥಣಿ ತಾಲೂಕು ಮಟ್ಟದ ಕ್ರೀಡಾಕೂಟ

■ ಉದಯರಶ್ಮಿ ದಿನಪತ್ರಿಕೆ

ಅಥಣಿ: ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ, ದೈಹಿಕ ಸಾಮರ್ಥ್ಯ ಶಿಸ್ತು ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವ ಉದ್ದೇಶದಿಂದ 2026-27ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಅಥಣಿ ತಾಲೂಕಾ ಮಟ್ಟದ ಕ್ರೀಡಾಕೂಟ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ ಆ.27ರಂದು ಬೆಳಿಗ್ಗೆ 9:30ಕ್ಕೆ ನಗರದ ಭೋಜರಾಜ ಕ್ರೀಡಾಂಗಣದಲ್ಲಿ ನಡೆಯಲಿದೆ.

ಎನ್ ಬಿ ಸಾಮಂತ ಪದವಿ ಪೂರ್ವ ಕಾಲೇಜು ರಡ್ಡೇರಹಟ್ಟಿ ಇವರ ನೇತೃತ್ವದಲ್ಲಿ ಕ್ರೀಡಾಕೂಟವನ್ನು ಆಯೋಜಿಸಲಾಗಿದ್ದು, ಸಹಕಾರ ಸಚಿವರಾದ ಲಕ್ಷ್ಮಣ ಸಂಗಪ್ಪ ಸವದಿ ಅವರು ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಮ್ ಎ ಚನ್ನಾಪೂರ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಲಿಂಗರಾಜು ಎನ್ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಪ ಪೂ ಚಿಕ್ಕೋಡಿ ಸಿದ್ದರಾಯ್ ಭೋಸಗಿ ತಹಶೀಲ್ದಾರ ಅಥ-'ಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಉಪನ್ಯಾಸಕರು ದೈಹಿಕ ಶಿಕ್ಷಣ ಉಪನ್ಯಾಸಕರು ಹಾಗೂ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

## ಸಿಂದಗಿ: ಆಕಸ್ಮಿಕ ಬೆಂಕಿಗೆ ಸುಟ್ಟು ಕರಕಲಾದ ಕಾರು




■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಹಳೆಯ ಬಜಾರದ ಕುಲಕರ್ಣಿ ಬಟ್ಟೆ ಅಂಗಡಿ ಸಮೀಪ ನಿಲ್ಲಿಸಲಾಗಿದ್ದ ರೇನಾಲ್ಟ್ ಡಸ್ಟರ್ (ಕೆಎ-28-ಎಮ್‌ಬಿ-3765) ಕಾರಿಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಸಂಪೂರ್ಣವಾಗಿ ಸುಟ್ಟುಹೋಗಿರುವ ಘಟನೆ ನಡೆದಿದೆ.

ದೇವರ ಹಿಪ್ಪರಗಿ ತಾಲೂಕಿನ ಮಾರ್ಕಪನಹಳ್ಳಿ ಗ್ರಾಮದ ಆನಂದ ಬಸವರಾಜ ಇಜೇರಿ (32) ಅವರಿಗೆ ಸೇರಿದ ಕಾರನ್ನು ಸಾರವಾಡ ಗ್ರಾಮದ ನಿವಾಸಿ, ಚಾಲಕ ಚಂದ್ರಕಾಂತ ಮಹಾಲಿಂಗಪ್ಪ ವಾಲಿ ಅವರು ಸಿಂದಗಿ ಹಳೆಯ ಬಜಾರದ ಕುಲಕರ್ಣಿ ಬಟ್ಟೆ ಅಂಗಡಿ ಬಳಿ ನಿಲ್ಲಿಸಿ ತೆರಳಿದ್ದರು ಎನ್ನಲಾಗಿದೆ. ಕೆಲ ಸಮಯದ ಬಳಿಕ ಕಾರಿಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದು, ಬೆಂಕಿಯ ತೀವ್ರತೆಗೆ ವಾಹನ ಸಂಪೂರ್ಣವಾಗಿ ಸುಟ್ಟುಹೋಗಿದೆ.

ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಬೆಂಕಿಗೆ ನಿಖರ ಕಾರಣವೇನು ಎಂಬುದು ಇನ್ನಷ್ಟೇ ತಿಳಿದು ಬರಬೇಕಿದೆ.

ಘಟನೆ ಕುರಿತು ಸಂಬಂಧಿಸಿದ ಸಿಂದಗಿ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಕಾಂತ ಕಾಂಬಳೆ ಮಾಹಿತಿ ನೀಡಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾರಿಗೆ ಬೆಂಕಿ ಹೊತ್ತಿಕೊಂಡಿರುವ ನಿಖರ ಕಾರಣದ ಕುರಿತು ತನಿಖೆ ತಿಳಿದು ಬರಬೇಕಿದೆ.

## ಭಕ್ತಿಯ ತ್ರಿವಿಧ ದಾಸೋಹಿ ಪೂಜ್ಯ ಡಾ.ಅಪ್ಪ

ಕಲಬುರಗಿ:ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಅವರು ಭಕ್ತಿ ದಾಸೋಹದ ಮೂಲಕ 'ತ್ರಿವಿಧ ದಾಸೋಹಿ', 'ಮಹಾದಾಸೋಹಿ' ಮತ್ತು "ಜ್ಞಾನ ದಾಸೋಹಿ'ಯಾಗಿದ್ದರು ಎಂದು ಶರಣಬಸವ ವಿವಿಯ ಕನ್ನಡ ವಿಭಾಗ ಸಹಾಯಕ ಪ್ರಾಧ್ಯಾಪಕಿ ಡಾ.ಚೆನ್ನಮ್ಮ ಅಲ್ಬಾ ಹೇಳಿದರು. ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ 40 ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ಮಂಗಳವಾರ ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಅವರ ಭಕ್ತಿ ದಾಸೋಹ ಎಂಬ ವಿಷಯ ಕುರಿತು ಮಾತನಾಡಿದರು. ಭಕ್ತಿ ದಾಸೋಹ ಎಂದರೆ ದೇವರ ಮೇಲಿನ ನಂಬಿಕೆ ಮತ್ತು ಭಕ್ತಿಯನ್ನು ಕೇವಲ ವೈಯಕ್ತಿಕ ಆರಾಧನೆಗೆ ಸೀಮಿತಗೊಳಿಸದೆ.

## ಫುಲ್ ಮ್ಯಾರಾಥಾನ ನಡೆಸಲು ಈಗಿನಿಂದಲೇ ಸಿದ್ಧತೆ

### ಡಿ.13 ರಂದು ವಿಜಯಪುರದಲ್ಲಿ ವೃಕ್ಷಥಾನ್ ಹೆರಿಟೇಜ್ ರನ್- 2026 । ಪೂರ್ವಭಾವಿ ಸಭೆಯಲ್ಲಿ ಡಾ.ಮಹಾಂತೇಶ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮುಂದಿನ ವರ್ಷದಿಂದ ವೃಕ್ಷಥ-'ಾನ್ ಹೆರಿಟೇಜ್ ರನ್ 42 ಕಿ.ಮಿ ಫುಲ್ ಮ್ಯಾರಾಥಾನ್ ನಡೆಸಲು ಈಗಿನಿಂದಲೇ ಸಿದ್ಧತೆ ನಡೆಸಲಾಗುತ್ತಿದೆ ಎಂದು ಡಾ. ಮಹಾಂತೇಶ ಬಿರಾದಾರ ತಿಳಿಸಿದ್ದಾರೆ.

ಬುಧವಾರ ನಗರದಲ್ಲಿ ವೃಕ್ಷಥಾನ್ ಹೆರಿಟೇಜ್ ರನ್-2026 ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಎನ್.ಇ.ಬಿ (NEB) ಸಂಸ್ಥೆ ಅಂತಾರಾಷ್ಟ್ರೀಯ ಮಟ್ಟದಲ್ಲಿ 42 ಕಿ. ಮಿ. ಫುಲ್ ಮ್ಯಾರಾಥಾನ್ ಸಂಘಟಿಸುವ ಸಂಸ್ಥೆಯೊಂದಿಗೆ ವೃಕ್ಷಥಾನ್ ಹೆರಿಟೇಜ್ ರನ್ ಆಯೋಜನೆ ಸಮಿತಿ ಫುಲ್ ಮ್ಯಾರಾಥಾನ್ ನಡೆಸಲು ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ 2027ರಲ್ಲಿ ವೃಕ್ಷಥಾನ್ ಹೆರಿಟೇಜ್ ರನ್ ಫುಲ್ ಮ್ಯಾರಾಥಾನ ನಡೆಸಲು ಈಗಿನಿಂದಲೇ ಸಿದ್ಧತೆ ಕೈಗೊಳ್ಳುವಂತೆ ಅವರು ಸಭೆಯಲ್ಲಿ ಉಪಸ್ಥಿತರಿದ್ದ ಪದಾಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಾರಿ ಡಿಸೆಂಬರ್ 13 ರಂದು ವೃಕ್ಷಥಾನ್ ಹೆ-ರಿಟೇಜ್ ರನ್- 2026 ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, ಆಧ್ಯಾತ್ಮಿಕ ಚಿಂತಕ ವಿನಯ ಗುರೂಜಿ, ಸಚಿವ ಕೃಷ್ಣ ಭೈರೇಗೌಡ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ ಅಧ್ಯಕ್ಷ ವೆಂಕಟೇಶ ಪ್ರಸಾದ, ಗುರುಪ್ರಸಾದ ಅವರನ್ನು ಆಹ್ವಾನಿಸಲು ನಿರ್ಧ-ರಿಸಲಾಗಿದೆ. ನೋಂದಣಿ ಪ್ರಕ್ರಿಯೆಯನ್ನು ಅಕ್ಟೋಬರ್ ನಲ್ಲಿ ಮುಕ್ತಾಯಗೊಳಿಸಲಾಗುವುದು. ವೃಕ್ಷೋಥಾನ್ ರನ್ ಜಾಗೃತಿಗಾಗಿ ಪ್ರತಿ ರವಿವಾರ ಈ ಓಟದ ಸಂಬಂಧ ಪ್ರಚಾರ ಚಟುವಟಿಕೆಗಳನ್ನು ನಡೆಸಲಾಗುವುದು. ಸೆಪ್ಟೆಂಬರ್ 6 ರಂದು ಮಹಿಳೆಯರಿಗಾಗಿ ಮತ್ತು ಸೆಪ್ಟೆಂಬರ್ 12 ರಂದು ಮಕ್ಕಳಿಗಾಗಿ ಓಟವನ್ನು ಆಯೋಜಿಸಲಾಗುವುದು. ಅಲ್ಲದೇ, ಮಕ್ಕಳಿಗಾಗಿ ನಿಬಂಧ ಮತ್ತು ಚಿತ್ರ ಬಿಡಿಸುವ ಸ್ಪರ್ಧೆಗಳನ್ನು ಆಯೋಜಿಸಲಾಗುವುದು. ಈ ಕುರಿತು ಶೀಘ್ರದಲ್ಲಿ ದಿನಾಂಕ,



ಸ್ಥಳ ಮತ್ತು ಸಮಯದ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಅವರು ತಿಳಿಸಿದರು.

ಮಹಾನಗರ ಪಾಲಿಕೆ ಸಿಬ್ಬಂದಿ, ಪೌರಕಾರ್ಮಿಕರು, ಅರಣ್ಯ ಇಲಾಖೆ ಸಿಬ್ಬಂದಿ, ಎನ್.ಸಿ.ಸಿ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗಾಗಿ ವೃಕ್ಷೋಥಾನ ಜಾಗೃತಿ ಓಟ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.

ಕೋಟಿವೃಕ್ಷ ಅಭಿಯಾನ ಸಂಚಾಲಕ ಡಾ. ಮುರುಗೇಶ ಪಟ್ಟಣಶೆಟ್ಟಿ ಮಾತನಾಡಿ, ಇತ್ತೀಚೆಗೆ ಕೋರ್ ಕಮಿಟಿ ಸದಸ್ಯರು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿದ್ದಾರೆ. ಆಗ ಸಚಿವರು ಹೊರ ರಾಜ್ಯಗಳ ವೃತ್ತಿಪರ ಓಟಗಾರರನ್ನು ಆಹ್ವಾನಿಸಲು ಸಲಹೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಬಳ್ಳಾರಿ, ಬೆಂಗಳೂರು, ಸೋಲಾಪುರ, ಪುಣೆ ಮತ್ತು ಹೈದ್ರಾಬಾದಗಳಲ್ಲಿ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಮನೆ (ಹೋಂ ಗಾರ್ಡನ್), ಬಡಾವಣೆಗಳಲ್ಲಿ ಉದ್ಯಾನ ಬೆಳೆಸಿರುವ ಪರಿಸರ ಪ್ರೇಮಿಗಳನ್ನು ಗುರುತಿಸಿ ಅವರ ಕಾರ್ಯವನ್ನು ಪರಿಶೀಲಿಸಿ ಅಂಥವರನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ಈ ಸಂದರ್ಭದಲ್ಲಿ ಡಿಎಫಗಳಾದ ಮಲ್ಲಿನಾಥ ಕುಸನಾಳ, ಶಿವರುದ್ರಪ್ಪ ಕಬಾಡಗಿ, ವೃಕ್ಷಥಾನ್ ಹೆ-ರಿಟೇಜ್ ರನ್ ಕೋರ್ ಕಮಿಟಿ ಪದಾಧಿಕಾರಿಗಳಾದ ಡಾ.ಶಂಕರಗೌಡ, ಸಂತೋಷ ಔರಸಂಗ, ಡಾ. ರಾಜು ಯಲಗೊಂಡ, ವಿನಯ ಕಂಚ್ಯಾಣಿ, ವೀರೇಂದ್ರ ಗುಚ್ಚೆಟ್ಟಿ, ಶಿವನಗೌಡ ಪಾಟೀಲ, ಶಿವಾನಂದ ಉಪಾಸೆ, ಗುರುಶಾಂತ ಕಾಪಸೆ, ಡಿ.ಕೆ.ತಾವಸೆ, ಡಾ.ಪ್ರವೀಣ ಚೌರ, ಶಿವಾನಂದ ಕುಂಬಾರ, ಸೋಮು ಮಠ, ಸೋಮಶೇಖರ ಸ್ವಾಮಿ, ಅಮೀತ ಬಿರಾದಾರ, ಮಹೇಶ ವಿ. ಶಟಗಾರ, ಸಿದ್ದು ನಾಯ್ಕೊಡಿ, ಅಶ್ಪಾಕ ಮನಗೂಳಿ, ಸಂದೀಪ ಮಡಗೊಂಡ, ಶ್ರೀಕಾಂತ ಹಡಲಗೇರಿ, ವೀಣಾ ದೇಶಪಾಂಡೆ, ಸಂಗಮೇಶ ಹಾವರಗಿ, ವಿನಯಕುಮಾರ ಕೋರೆ, ರಮೇಶ ಬಿರಾದಾರ, ಸಮೀರ ಬಳಿಗಾರ, ನಂದೀಶ ಹುಂಡೇಕಾರ, ವಿಜಯ ರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.

## ಇಂದು ಎಸ್.ಬಿ.ಆರ್ಟ್ಸ್ & ಕೆ.ಸಿ.ಪಿ. ಸೈನ್ಸ್ ಕಾಲೇಜ್ನಲ್ಲಿ ಖೇಲೋ ಇಂಡಿಯಾ ಸಂವಾದ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಆರ್ಟ್ಸ್ ಮತ್ತು ಕೆ.ಸಿ.ಪಿ. ಸೈನ್ಸ್ ಕಾಲೇಜು "ಖೇಲ್ ಕಿ ಬಾತ್ ಪಿಎಂ ಮೋದಿ ಕೆ ಸಾಥ್"

ಖೇಲೋ ಇಂಡಿಯಾ ಸಂವಾದ ಆಯೋಜಿಸಲು ವಿಜಯಪುರದ ಕಾಲೇಜು ಆಯ್ಕೆಯಾಗಿದೆ.

ಖೇಲೋ ಇಂಡಿಯಾ ಸಂವಾದ "ಖೇಲ್ ಕಿ ಬಾತ್ ಪಿಎಂ ಮೋದಿ ಕೆ ಸಾಥ್" ಮಹಾವಿದ್ಯಾಲಯದ ಸಭಾಂಗಣದಲ್ಲಿ ಬೆಳಿಗ್ಗೆ 10:00 ಗಂಟೆಗೆ ಆಯೋಜಿಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಕ್ರೀಡಾ ಮನೋಭಾವ, ದೈಹಿಕ ಕ್ಷಮತೆ, ಶಿಸ್ತು, ತಂಡಭಾವನೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಹಾಗೂ ಎನ್‌ಎಸ್‌ಎಸ್ ಸ್ವಯಂಸೇವಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಭಾಗವಹಿಸಲು ಈ ಕಾರ್ಯಕ್ರಮವು ಉತ್ತಮ ಅವಕಾಶವನ್ನು ಒದಗಿಸಲಿದೆ.

ಈಹಿನ್ನೆಲೆಯಲ್ಲಿವಿಜಯಪುರಜಿಲ್ಲೆಯಎಲ್ಲಾಸಂಯೋಜಿತ ಕಾಲೇಜುಗಳು ತಮ್ಮ ಎನ್‌ಎಸ್‌ಎಸ್ ಸ್ವಯಂಸೇವಕರನ್ನು ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ ಎಂದು ಮಹಾವಿದ್ಯಾಲಯದ ಪ್ರಕಟಣೆ ತಿಳಿಸಿದೆ.

## ಚತುಷ್ಪಷ್ಟಿ ಕಲೆಗಳನ್ನು ಬೆಳೆಸುತ್ತಿರುವ ಸಂಸ್ಕಾರ ಭಾರತಿ

ಬೀದರ್: ಕಲೆಗಾಗಿ ತಮ್ಮ ಇಡೀ ಜೀವನ ಮುಡಿಪಾಗಿಟ್ಟ ಕಲಾವಿದರನ್ನು ಗುರುತಿಸಿ ಅವರಿಗೆ ಸತ್ಕರಿಸುವ ಕಾರ್ಯ ಹಿಂದಿನಿಂದಲೂ ಸಂಸ್ಕಾರ ಭಾರತಿ ಮಾಡುತ್ತ ಬಂದಿದೆ ಎಂದು ಸಂಸ್ಕಾರ ಭಾರತಿ ಕರ್ನಾಟಕ ಉತ್ತರ ಪ್ರಾಂತದ ಸಹ ಸಂಯೋಜಕಿ ಲೀಲಾವತಿ ಕುಲಕರ್ಣಿ ಕಲಬುರಗಿ ನುಡಿದರು.

ಕರ್ನಾಟಕ ಸಾಹಿತ್ಯ ಸಂಘ, ಸಂಸ್ಕಾರ ಭಾರತಿ ಜಿಲ್ಲಾ ಘಟಕ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಕರೋಡಿಮಲ್ ಬಡಾವಣೆಯಲ್ಲಿರುವ ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಆಯೋಜಿಸಿದ ಗುರುಪೂರ್ಣಿಮಾ ಹಾಗೂ ನಟರಾಜ ಪೂಜನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

1998 ರಲ್ಲಿ ಪ್ರಾರಂಭವಾದ ಸಂಸ್ಕಾರ ಭಾರತಿ 200 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದೆ. ನಟರಾಜನು ತನ್ನ ತಾಂಡವನೃತ್ಯದಮೂಲಕಜಗತ್ತಿಗೆಕಲೆಯನ್ನುಪರಿಚಯಿಸಿದ. ಕಲೆಯಿಂದ ಮಕ್ಕಳು ಸಂಸ್ಕಾರವಂತರಾಗಿ ಬದುಕುತ್ತಾರೆ. ಒಂದು ದೇಶದ ಮಕ್ಕಳು ಉತ್ತಮ ನಾಗರಿಕರಾಗಿ ಬೆಳೆಯಬೇಕಾದರೆ ಆ ದೇಶದ ಸಂಸ್ಕೃತಿ ಮತ್ತು ಸಂಸ್ಕಾರಯುತ ವಾತಾವರಣ ಕಾರಣವಾಗುತ್ತದೆ. ಅಂತಹ ಪೂರಕ ವಾತಾವರಣ ಭಾರತದಲ್ಲಿದೆ. ಕುಂಠಿತಗೊಳ್ಳುತ್ತಿರುವ ಸಾಮರಸ್ಯ ಬೆಳೆಸೋಣ ಎಂದರು.

ಸಂಸ್ಕಾರ ಭಾರತಿಯ ಪ್ರಾಂತ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ ಪ್ರಾಸ್ತಾವಿಕ ಮಾತನಾಡಿ ನಟರಾಜನ ಸ್ಮರಣೆ ಮೂಲಕ ಅಳಿವಿನಂಚಿನಲ್ಲಿರುವ ಕಲೆಗಳನ್ನು ಉಳಿಸಿ ಬೆಳೆಸೋಣ. ನಮಗೆ ತಿದ್ದಿ ತೀಡಿದ ಗುರುಗಳಿಗೆ ವಂದಿಸೋಣ ಎಂದರು.

ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷ ಡಾ. ಜಗನ್ನಾಥ ಹೆಬ್ಬಾಳೆ ಮಾತನಾಡಿ ನಮ್ಮ ಪೂರ್ವಜರು ಕೊಟ್ಟ ಸಂಸ್ಕೃತಿ ಪವಿತ್ರವಾದುದು. ಅದನ್ನು ಇಂದಿನ ಪೀಳಿಗೆ ಮುಂದುವರೆಸಿಕೊಂಡು ಹೋಗಬೇಕು. ನಶಿಸುತ್ತಿರುವ ಕಲೆಗಳನ್ನು ಯುವಕರು ಉಳಿಸಬೇಕು. ದೇಶದ ಉತ್ತಮ ಸಂಸ್ಕೃತಿ ಅಳವಡಿಸಿಕೊಂಡು ಸಂಸ್ಕಾರವಂತರಾಗಿ ಬದುಕಿದಾಗ ಬದುಕು ಆನಂದಮಯವಾಗುತ್ತದೆ. ನೃತ್ಯ, ಗಾಯನ, ಕಲೆಯಿಂದ ವ್ಯಕ್ತಿಯು ದೀರ್ಘಕಾಲದ ಕಾಯಿಲೆಗಳಿಂದ ದೂರ ಉಳಿಯುತ್ತಾನೆ ಎಂದರು. ಈ ನಿಟ್ಟಿನಲ್ಲಿ ಸಂಸ್ಕಾರ ಭಾರತಿ ಕಾರ್ಯ ಶ್ಲಾಘನೀಯ ಎಂದರು.

ಅಧ್ಯಕ್ಷತೆಯನ್ನು ಸಂಸ್ಕಾರ ಭಾರತಿ ಜಿಲ್ಲಾ ಘಟಕ ಅಧ್ಯಕ್ಷ ಶಿವಶರಣಪ್ಪ ಕಮಠಾಣೆ ವಹಿಸಿದ್ದರು.

ಕಲಾವಿದರಾದ ಎಸ್.ಬಿ. ಕುಚಬಾಳ, ನಿವೇದಿತಾ ಸ್ವಾಮಿ, ಪ್ರಿಯಂಕಾ ಗುರುದೇವ ಅವರನ್ನು ಸನ್ಮಾನಿಸಲಾಯಿತು.

ಖ್ಯಾತ ಸಂಗೀತ ಕಲಾವಿದರಾದ ಅಶ್ವಿನಿ ಬಂಪಳ್ಳಿ ಹಾಗೂ ರಾಜಕುಮಾರ ಸ್ವಾಮಿ ಬಂಪಳ್ಳಿ ಹಾಗೂ ಗುರುದೇವ ಅವರು ಧ್ಯೇಯಗೀತೆಗಳ ಗಾಯನ ನಡೆಸಿಕೊಟ್ಟರು.

ವೇದಿಕೆ ಮೇಲೆ ವಸತಿ ನಿಲಯದ ಮೇಲ್ವಿಚಾರಕಿ ಸುಧಾರಾಣಿ ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR